
ಸಿದ್ಧಗಂಗಾ



ಮಾರ್ಚ್, ೧೯೭೬

'ಸಿದ್ಧಗಂಗಾ' ಪತ್ರಿಕೆಯ ಒಡೆತನ ಮತ್ತಿತರ ವಿವರಗಳ ಪ್ರಕಟಣೆ

ಫಾರಂ 4 [ವಿಧಿ 8]

1]	ಪ್ರಕಟಣೆಯ ಸ್ಥಳ	—	ಶ್ರೀ ಸಿದ್ಧಗಂಗಾ ಮಠ
2]	ಪ್ರಕಟಣೆಯ ನಿಯತಕಾಲಿಕತೆ	—	ಮಾಸಪತ್ರಿಕೆ
3]	ಮುದ್ರಕರ ಹೆಸರು	—	ಶ್ರೀ ಶಿವಕುಮಾರ ಸ್ವಾಮಿಗಳು
	ಭಾರತದ ಪ್ರಜೆಯೇ?	—	ಹೌದು
	ವಿಳಾಸ	—	ಶ್ರೀ ಸಿದ್ಧಗಂಗಾ ಮಠ, ತುಮಕೂರು ಜಿಲ್ಲೆ
4]	ಪ್ರಕಾಶಕರ ಹೆಸರು	—	ಹೆಚ್. ಬಿ. ಗಂಗಾಧರಯ್ಯ
	ಭಾರತದ ಪ್ರಜೆಯೇ?	—	ಹೌದು
	ವಿಳಾಸ	—	ಶ್ರೀ ಸಿದ್ಧಗಂಗಾ ಮಠ ತುಮಕೂರು ಜಿಲ್ಲೆ
5]	ಸಂಪಾದಕರ ಹೆಸರು	—	ಚನ್ನಪ್ಪ ಎರೆಸೀಮೆ
	ಭಾರತದ ಪ್ರಜೆಯೇ?	—	ಹೌದು
	ವಿಳಾಸ	—	ಶ್ರೀ ಸಿದ್ಧಗಂಗಾ ಮಠ ತುಮಕೂರು ಜಿಲ್ಲೆ
6]	ಪತ್ರಿಕೆಯ ಒಡೆತನ ವಹಿಸಿರುವ ವ್ಯಕ್ತಿಗಳು ಮತ್ತು ಪಾಲುದಾರರ ಅಥವಾ ಒಟ್ಟು ಬಂಡವಾಳದ ಶೇ ೧ ಕ್ಕಿಂತ ಹೆಚ್ಚು ಭಾಗಕ್ಕೆ ಪಾಲುದಾರರಾದವರ ಹೆಸರು ಮತ್ತು ವಿಳಾಸ	—	ಶ್ರೀ ಶಿವಕುಮಾರ ಸ್ವಾಮಿಗಳು ಸಿದ್ಧಗಂಗಾ ಮಠ ತುಮಕೂರು ಜಿಲ್ಲೆ

ಮೇಲೆ ಕೊಟ್ಟಿರುವ ವಿವರಗಳು ನನಗೆ ತಿಳಿದ ಮಟ್ಟಿಗೆ ಮತ್ತು ನನ್ನ ನಂಬಿಕೆಯಂತೆ ನಿಜವೆಂದು ನಾನು, ಹೆಚ್. ಬಿ. ಗಂಗಾಧರಯ್ಯ, ಘೋಷಿಸುತ್ತೇನೆ.

[ಸಹಿ] ಹೆಚ್. ಬಿ. ಗಂಗಾಧರಯ್ಯ
ಪ್ರಕಾಶಕ

ದಿನಾಂಕ : 1-3-78

"ಸಿದ್ಧಗಂಗಾ" ಶ್ರೀ ಸಿದ್ಧಗಂಗಾ ಮಠ, ತುಮಕೂರು ಜಿಲ್ಲೆ



ಶ್ರೀವಾಣಿ

ಭಾರತ ಖಂಡದ ಆರ್ಯ ಜನಾಂಗ ದೊಡ್ಡ ಸಾಧನೆಯನ್ನು ಮಾಡಿದೆ, ವಿಶಾಲವಾದ ಭಾವನೆಯನ್ನು ಬೆಳೆಸಿಕೊಂಡಿದೆ. ವಿಶ್ವಕ್ಕೆ ಅನುಪಮ ಕಾಣಿಕೆಯನ್ನೇ ಸಲ್ಲಿಸಿದೆ. ನಮ್ಮ ಪೂರ್ವಜರು ಪ್ರತಿಭೆಗೆ ಹೆಸರಾಂತವರು. ಈ ಪ್ರತಿಭೆಯ ಒಂದು ಭಾಗ ಸಹಜ ಸ್ಫೂರ್ತಿಯಿಂದ ಸ್ಫುರಿಸಿದರೆ, ಉಳಿದ ತೊಂಭೊತ್ತೊಂಭತ್ತು ಭಾಗ ವ್ಯವಸಾಯದಿಂದ ಬರುವಂತಹದು. ಇಂಥ ವ್ಯವಸಾಯಮಾಡಲು ಅತುಲವಾದ ಶ್ರದ್ಧೆಯಿರಬೇಕು. ನಿದರ್ಶನಕ್ಕಾಗಿ ಕಾಡು ಹುಡುಗನಾದ ಏಕಲವ್ಯನು ಗುರುವಿನ ನೇರ ಮಾರ್ಗದರ್ಶನವಿಲ್ಲದೆ ಅರ್ಜುನನಿಗಿಂತಲೂ ಅಪ್ರತಿಮ ಪ್ರತಿಭಾಶಾಲಿಯಾಗಬೇಕಾದರೆ ಆತನಲ್ಲಿ ಅಡಗಿದ್ದ ಅಗಾಧವಾದ ಶಕ್ತಿಯಾವುದು ಎಂದು ಪ್ರಶ್ನಿಸಿಕೊಂಡಾಗ, ಗಾಢವಾದ ಶ್ರದ್ಧೆಯೇ ಅದಕ್ಕೆ ಕಾರಣವೆಂಬ ಉತ್ತರ ಯಾರಿಗಾದರೂ ತಿಳಿಯದಿರದು. ಇದನ್ನೆ ಭಗವಂತನು ಭಗವದ್ಗೀತೆಯಲ್ಲಿ ಅಪ್ಪಣೆ ಕೊಡಿಸಿದ್ದಾನೆ. 'ಶ್ರದ್ಧಾವಾನ್ ಲಭತೇಜ್ಞಾನಂ' ಎಂಬುದಾಗಿ. ಆದರೆ ಯಾವ ದುರಾದೃಷ್ಟವೋ ಏನೋ ಇಂದು ಶಿಕ್ಷಣರಂಗದಲ್ಲಿ ಅಂತಹ ಶ್ರದ್ಧೆ ಶೂನ್ಯವಾಗಿದೆ. ಶಿಕ್ಷಣ ಅರ್ಥರಹಿತವಾಗಿದೆ, ಕೇವಲ ಓದು ಬರಹ ಕಲಿಯುವುದು ಅಥವಾ ಕೇವಲ ಜೀವಿಕೆಗಾಗಿ ಉಪಾಧಿ (ಡಿಗ್ರಿ) ಪಡೆಯುವುದೆಂಬ ಲಘುವಾದ ಅರ್ಥ, ಶಿಕ್ಷಣಕ್ಕೆ ಅಂಟಿಕೊಂಡಿದೆ. ನಮ್ಮ ಹಿಂದಿನ ದಾರ್ಶನಿಕರು ವ್ಯಕ್ತಿಯ ಸಮಗ್ರ ಬೆಳವಣಿಗೆಯನ್ನು ಶಿಕ್ಷಣವೆಂದು ಕರೆಯುತ್ತಿದ್ದರು. ಅಷ್ಟೇಕೆ 'ಯಾ ವಿದ್ಯಾ ಸಾ ವಿಮುಕ್ತಯೇ' ಎಂಬುದು ವಿದ್ಯೆಗೆ ಅವರು ಕೊಟ್ಟ ವ್ಯಾಖ್ಯಾನ.

ಒಟ್ಟಿನಲ್ಲಿ ವಿಶ್ವದಲ್ಲಿ ಮಂಗಳ ಮಯವಾದ ವಾತಾವರಣವುಂಟಾಗಬೇಕಾದರೆ ಶ್ರದ್ಧಾಪೂರ್ಣವಾದ ಶಿಕ್ಷಣಕ್ರಮದಿಂದ ಮಾತ್ರ ಸಾಧ್ಯ.

‘ಸಿದ್ಧಗಂಗಾ’

ಮಾರ್ಚ್, ೧೯೭೮

ಸಂಪುಟ-೧೪ ಸಂಚಿಕೆ- ೩

ಪ್ರಕಾಶಕರು
ಹೆಚ್. ಬಿ. ಗಂಗಾಧರಯ್ಯ
ಹಳೆಯ ವಿದ್ಯಾರ್ಥಿಸಂಘದ ಪರವಾಗಿ

ಸಂಪಾದಕ ಮಂಡಲಿ
ಪಂ॥ ಚನ್ನಪ್ಪ ಎರೇಸೀಮೆ
ಪಿ. ಎಸ್. ಚಂದ್ರಶೇಖರಯ್ಯ
ವಿರೂಪಾಕ್ಷಯ್ಯ
ಬಸವರಾಜು

ಜಾಹಿರಾತು ವ್ಯವಸ್ಥಾಪಕರು
ಎಂ. ರೇಣುಕಾರಾಧ್ಯ

ಮುದ್ರಕರು
ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ಮುದ್ರಣಾಲಯ

ಪ್ರಕಟನೆಯ ಸ್ಥಳ
ಶ್ರೀ ಸಿದ್ಧಗಂಗಾ ಕ್ಷೇತ್ರ

ಚಂದಾ ವಿವರ

ಆಜೀವ ಸದಸ್ಯತ್ವ: **151-00** ರೂ

ವಾರ್ಷಿಕ ಚಂದಾ: **10-00** ರೂ

ಈ ಸಂಚಿಕೆಯಲ್ಲಿ

ಮುಖಪುಟ

ವಸ್ತುಪ್ರದರ್ಶನದ ಮುಕ್ತಾಯ ಸಮಾರಂಭದಲ್ಲಿ ತುಮಕೂರು ಜಿಲ್ಲಾಧಿಕಾರಿಗಳು ಬಹುಮಾನ ವಿತರಣೆ ಮಾಡುತ್ತಿರುವುದು. ಚಿತ್ರದಲ್ಲಿ ಶ್ರೀ ಶ್ರೀ ಗಳವರು ಮತ್ತು ಶಾಸಕರಾದ ವಿ. ಎಲ್. ಶಿವಪ್ಪನವರೂ ಉಪಸ್ಥಿತರಿದ್ದಾರೆ.

ಲೇಖಕರಲ್ಲಿ ಮನವಿ

‘ಸಿದ್ಧಗಂಗಾ’ ಲೇಖಕರಿಂದ ಧಾರ್ಮಿಕ, ಸಾಂಸ್ಕೃತಿಕ ಐತಿಹಾಸಿಕ ಹಾಗೂ ವೈಚಾರಿಕ ಲೇಖನಗಳು, ಸಣ್ಣಕಥೆ, ಕವನ, ಪ್ರಬಂಧ ಇವುಗಳನ್ನು ಸದಾ ಸ್ವಾಗತಿಸುತ್ತದೆ. ಲೇಖನಗಳು ಫುಲ್‌ಸ್ಕೇಪ್ ಸೈಜಿನ 3 ಪುಟಗಳಿಗೆ ಮೀರದಂತಿದ್ದು ಕಾಗದದ ಒಂದೇ ಮಗ್ಗುಲಲ್ಲಿ ಬರೆಯಲ್ಪಟ್ಟಿರಬೇಕು. ಅಸ್ವೀಕೃತ ಲೇಖನಗಳನ್ನು ಹಿಂದಿರುಗಿಸಲಾಗುವುದಿಲ್ಲ. ಸ್ವೀಕೃತ ಲೇಖನಗಳಿಗೆ ‘ಸಿದ್ಧಗಂಗಾ’ ಆಗಿಂದಾಗ್ಗೆ ನಿಗದಿಪಡಿಸಿಕೊಳ್ಳುವ ಸಂಭಾವನೆಯನ್ನು ನೀಡಲಾಗುವುದು. ಲೇಖನಗಳನ್ನು

“ಸಂಪಾದಕರು”

“ಸಿದ್ಧಗಂಗಾ” [ಕನ್ನಡ ಮಾಸ ಪತ್ರಿಕೆ]
ಶ್ರೀ ಸಿದ್ಧಗಂಗಾ ಕ್ಷೇತ್ರ-572131 ತುಮಕೂರು ಜಿಲ್ಲೆ

ಇವರಿಗೆ ಕಳಿಸಿಕೊಡಬೇಕಾಗಿ ಪ್ರಾರ್ಥನೆ.

ಚಂದಾದಾರರಲ್ಲಿ ಮನವಿ

ಹೊಸ ವರ್ಷದ ನಿಮ್ಮ ಚಂದಾ ನಂಬರ್ ಗುರುತಿಸಿ ಕೊಳ್ಳಿ. ಚಂದಾ ಅವಧಿ ಮುಗಿಯುವವರೆಗೆ ವಿಳಾಸ ಬದಲಾವಣೆ ಮತ್ತು ಇತರೆ ಬಗ್ಗೆ ವ್ಯವರಿಸುವಾಗ ನಿಮ್ಮ ವಿಳಾಸದ ಹಿಂಬದಿ ಇರುವ ಚಂದಾ ನಂಬರ್ ಅಥವಾ ಯಾರ ಮೂಲಕ ಸದಸ್ಯತ್ವ ಪಡೆದಿರುವಿರೋ ಆ ನಮ್ಮ ಪ್ರತಿನಿಧಿಗಳ ಹೆಸರನ್ನು ಸೂಚಿಸಿ ವ್ಯವಹರಿಸಿ.

ಚಂದಾ ಬಾಕಿ ಇರುವವರು ಸಂದಾಯ ಮಾಡಿ ‘ಸಿದ್ಧಗಂಗಾ’ ಮುನ್ನಡೆಗೆ ಸಹಕರಿಸಿ.

ಚಂದಾ ಅವಧಿ ಮುಗಿದಿರುವ ಮಾನ್ಯ ಓದುಗರು ಮುಂದಿನ ಸಾಲಿಗೆ ಮುಂದುವರಿಸಿಕೊಳ್ಳಬೇಕಾಗಿ ಪ್ರಾರ್ಥನೆ.

ಪ್ರಕಾಶಕರು

‘ಸಿದ್ಧಗಂಗಾ’ ಮಾಸ ಪತ್ರಿಕೆ, ಸಿದ್ಧಗಂಗಾ ಮಠ-572131 ತುಮಕೂರು ಜಿಲ್ಲೆ

ನವನೀತ

(ಸಂಸ್ಕೃತ ಶ್ಲೋಕಗಳ ಭಾವಾನುವಾದ)

ಅನ್ನದಾನಂ ಪರಂ ದಾನಂ ವಿದ್ಯಾದಾನಮತಃ ಪರಮ್ ।
ಅನ್ನೇನ ಕ್ಷಣಿಕಾ ತೃಪ್ತಿಃ ಯಾವಜ್ಜೀವಂ ಚ ವಿದ್ಯಯಾ ॥

ದಾನಗಳಲುತ್ತಮವು ಅನ್ನದಾನ
ಶ್ರೇಷ್ಠತರವದಕಿಂತ ಜ್ಞಾನದಾನ
ಅನ್ನದಿಂ ಸಿಗುವ ಸುಖ-ತೃಪ್ತಿ ಕ್ಷಣಿಕ
ಜ್ಞಾನದಿಂದುಳಿವುದದು ಅಳಿವತನಕ.

ಅಜರಾಮರವತ್ಪ್ರಾಜ್ಞಃ ವಿದ್ಯಾಮರ್ಥಂ ಚ ಸಾಧಯೇತ್ ।
ಗೃಹೀತ ಇವ ಕೇಶೇಷು ಮೃತ್ಯುನಾ ಧರ್ಮಮಾಚರೇತ್ ॥

ಮುಪ್ಪು-ಮರಣಗಳಿರವು ಎಂದು ತಿಳಿದು
ವಿದ್ಯೆಯನ್ನು, ಹಣವನ್ನು ಆರ್ಜಿಸುವುದು.
ಮೃತ್ಯು ಹಿಡಿದೆಳೆಯುತಿಹನೆಂದು ಅರಿತು
ಧರ್ಮವನ್ನಾಚರಿಸುತಿರುವುದೊಳಿತು.

ಜನಿತಾಚೋಪನೇತಾ ಚ ಯಸ್ತು ಕನ್ಯಾಂ ಪ್ರಯಚ್ಛತಿ ।
ಅನ್ನದಾತಾ ಭಯತ್ರಾತಾ ಪಂಚೈತೇ ಪಿತರಃ ಸ್ಮೃತಾಃ ॥

ಜನ್ಮವಿತ್ತವ ಮತ್ತೆ ಸಲಹಿದಾತ
ಕನ್ಯೆಯಿತ್ತವ ಜೊತೆಗೆ ಅನ್ನದಾತ
ರಕ್ಷಣೆಯಿತ್ತವನು -ಇವರು ನಮಗೆ
ಐದು ಜನ ತಂದೆಯವರು ನೆನೆವುದಕ್ಕೆ.

—‘ಕಾವ್ಯಸುಧಾಪ್ರಿಯ’

ಅಮೃತ ಬಿಂದು

ಸಮಾಜ ವಿವಿಧ ವ್ಯಕ್ತಿಗಳ ಸಂಗಮ ಸಂಸ್ಥೆ-ವ್ಯಕ್ತಿಯು ಸಮಾಜದ ಹೊಳಹೊರಗನ್ನು ವ್ಯಾಪಿಸಿರುವ ಕೇಂದ್ರಬಿಂದು. ಪ್ರತಿಯೊಬ್ಬ ವ್ಯಕ್ತಿಯೂ ನೆರೆಹೊರೆಯವರ ಸುಖದುಃಖಗಳಲ್ಲಿ ಸೇವಾಮನೋಭಾವದಿಂದ ಸ್ವಇಚ್ಛೆಯಿಂದ ಭಾಗವಹಿಸಬೇಕಾಗುತ್ತದೆ, ಸಮಾಜ ಸುವ್ಯವಸ್ಥೆಯಿಂತಿರಬೇಕಾದರೆ, ಸ್ವ ಇಚ್ಛೆಯಿಂದ ಭಾಗವಹಿಸಬೇಕಾದ ಪ್ರಸಂಗ ಬಂದಾಗ ಯಾರು ಇನ್ನೊಬ್ಬರ ಹಿತಕ್ಕಾಗಿ ಸ್ವಂತ ಸುಖದುಃಖವನ್ನು ಲೆಕ್ಕಿಸದೆ ತಾವು ಅನುಭವಿಸಬೇಕಾದ ಸುಖವನ್ನು ಪರರ ಹಿತಕ್ಕಾಗಿ ತ್ಯಜಿಸುತ್ತಾರೆ. ಅಂತಹವರು “ಸಜ್ಜನ”ರೆನಿಸಿಕೊಳ್ಳುತ್ತಾರೆ. ಇವರು ಇನ್ನೊಬ್ಬರ ಕಣ್ಣೀರು ತನ್ನ ಕಣ್ಣೀರೆಂದು ಭಾವಿಸುತ್ತಾರೆ. ಅವರಿಗಾಗಿ ಮರುಗುತ್ತಾರೆ, ಕನಿಕರ ತೋರಿಸುತ್ತಾರೆ. ಇನ್ನು ಕೆಲವರು ತನ್ನ ಸುಖವನ್ನು ಕಡೆಗಣಿಸದೆ ಬೇರೊಬ್ಬರ ಸುಖವನ್ನು ಬಯಸಿ ಅವರಿಗೆ ನೆರವಾಗುತ್ತಾರೆ. ಅವರು “ಸಾಮಾನ್ಯ”ರೆನಿಸಿಕೊಳ್ಳುತ್ತಾರೆ. ಇವರಿಗೆ ಇಬ್ಬರ ಹಿತವು ಮುಖ್ಯ. ಮತ್ತೆ ಕೆಲವರು ತನ್ನ ಸುಖಕ್ಕಾಗಿ ತನ್ನವರ ಸುಖಕ್ಕಾಗಿ ಇನ್ನೊಬ್ಬರ ಆಸೆ ಆಕಾಂಕ್ಷೆಗಳನ್ನು ಮತ್ತು ಅವರ ಒಳಿತನ್ನು ಹಾಳುಮಾಡುತ್ತಾರೆ. ಅವರಿಗೆ ತನ್ನ ಸುಖವೇ ಅತಿಯಾಗಿರುತ್ತದೆ. ಇನ್ನೊಬ್ಬರ ಕಣ್ಣೀರು ಸಾವುನೋವುಗಳು ಇವರ ಗಮನಕ್ಕೇ ಬರುವುದಿಲ್ಲ. ಅವರು ಏನಾದರೂ ಸರಿಯೇ ತಾನೊಬ್ಬ ಸುಖವಾಗಿದ್ದರೆ ಸಾಕು. ತನ್ನವರು ಸುಖವಾಗಿದ್ದರೆ ಸಾಕು, ಬೇರೊಬ್ಬರ ಸಮಾಧಿಯ ಮೇಲೆ ಸೌಧ ಕಟ್ಟಿ ಮೆರೆದರೂ ಸರಿಯೆ ಉಳಿದವರ ಅಳಲು ಇವನ ಕಿವಿಗೆ ಕೇಳಿಸದು. ಇಂತಹ ಮಾನವರನ್ನು “ಮಾನವರಾಕ್ಷಸ”ರೆನುತ್ತಾರೆ.

—‘ದುಂಬಿ’

ವೀರಶೈವಾಮೃತ ಮಹಾಪುರಾಣ

—ಚನ್ನಪ್ಪ ಎರೇಸೀಮೆ.

> ವೀರಶೈವಾಮೃತ ಮಹಾಪುರಾಣ ವೀರಶೈವ ಸಂಸ್ಕೃತಿ ಸಾಹಿತ್ಯ ದೃಷ್ಟಿಯಿಂದ ಒಂದು ವಿಶ್ವಕೋಶವಿದ್ದ ಹಾಗೆ. ಇದೊಂದು ಮಹಾಸಾಗರವಿದ್ದಂತೆ. ಸಾಹಿತ್ಯಚರಿತ್ರೆ, ಪುರಾಣ, ಸಿದ್ಧಾಂತ, ವೇದಾಂತಾದಿ ಶಾಸ್ತ್ರ ವಿಚಾರಗಳನ್ನು ಹೇಳಿದ ಲಸತ್ಕವಿ ಮಲ್ಲಣಾರ್ಯರ ಈ ಮಹಾಸಾಹಸಕ್ಕೆ ಓದುಗ ಮೂಕ ವಿಸ್ಮಯನಾಗುತ್ತಾನೆ. ಇಂಥ ಕೃತಿ ಪರಿಚಯವನ್ನು ಸ್ಥೂಲವಾಗಿಲ್ಲಿ ಮಾಡಿಕೊಡಲಾಗಿದೆ. —ಸಂ.

ವೀರಶೈವ ಧರ್ಮೇತಿಹಾಸದಲ್ಲಿ ಪ್ರಸಿದ್ಧವಾದ ಗುಬ್ಬಿಗೆ ಅನುಗೊಂಡ ಹೆಸರು. ಇಲ್ಲಿ ೧೨ ನೆಯ ಶತಮಾನದಲ್ಲಿ 'ಅಮರಗೊಂಡದ ಮಲ್ಲಿಕಾರ್ಜುನ'ನೆಂಬ ಪ್ರಖ್ಯಾತ ವಚನಕಾರನು ಈ ಊರಿನಲ್ಲಿ ಆಗಿ ಹೋಗಿದ್ದಾನೆ. ೧೫-೧೬ ನೆಯ ಶತಮಾನದಲ್ಲಿ ಇಲ್ಲಿ ಪ್ರಸಿದ್ಧರಾದ ವಿದ್ವಾಂಸರು, ದಾರ್ಶನಿಕರೂ ಆಗಿ ಹೋಗಿದ್ದಾರೆ. ತೋಂಟದ ಸಿದ್ಧಲಿಂಗೇಶ್ವರರ ಗುರುಗಳಾದ ಜಗದ್ಗುರು ಚನ್ನಬಸವೇಶ್ವರರು ಲಿಂಗೈಕ್ಯರಾದದ್ದು ಇದೇ ಊರಿನಲ್ಲಿ. ಇಲ್ಲಿ ಈಗಲೂ ಅವರ ಭವ್ಯವಾದ ಗದ್ದುಗೆಯಿದ್ದು. ಇದು ವೀರಶೈವರ ಪವಿತ್ರ ಕ್ಷೇತ್ರವೆನಿಸಿದೆ.

ಈ ಊರಿನಲ್ಲಿ ಕ್ರಿ. ಶ. ಸು. ೧೪೭೫ರಲ್ಲಿ ಗುಬ್ಬಿಯ ಮಲ್ಲಣನೆಂಬ ಹೆಸರಿನ ದಾರ್ಶನಿಕನಾಗಿಹೋಗಿದ್ದಾನೆ. ಅವನು ವಾತುಲಾಗಮಕ್ಕೆ ಟೀಕೆಯನ್ನು ಬರೆದುದಲ್ಲದೆ, ಗಣಭಾಷಿತ ರತ್ನಮಾಲೆಯೆಂಬ ಸ್ಥಲಕಟ್ಟಿಗನುಗುಣವಾಗಿ ಜೋಡಿಸಿದ ವಚನ ಸಂಕಲನ ಗ್ರಂಥವನ್ನು ರಚಿಸಿದ್ದಾನೆ. ಈತನ ಮೊಮ್ಮಗನೇ 'ವೀರಶೈವಾಮೃತ ಮಹಾಪುರಾಣ' ಮತ್ತು 'ಭಾವಚಿಂತಾರತ್ನ'ಗಳೆಂಬ ಎರಡು ಕನ್ನಡ ಕೃತಿಗಳನ್ನು ಮಾಡಿದ ಮಹಾಕವಿ. ಈತನು ಕ್ರಿ. ಶ. ೧೫೧೩ರಲ್ಲಿ ಭಾವಚಿಂತಾರತ್ನವನ್ನು ಕ್ರಿ ಶ. ೧೫೩೦ರಲ್ಲಿ ವೀರಶೈವಾಮೃತ ಮಹಾಪುರಾಣವನ್ನು ಮುಗಿಸಿದಹಾಗೆ ತಿಳಿದುಬರುವುದು. ಇದಲ್ಲದೆ ಈ ಕವಿ ಪುರಾತನ ರಗಳೆಯನ್ನು ಬರೆದ ಹಾಗೆ ತಿಳಿದುಬರುವುದು. ಆದರೆ ಅದು ಉಪಲಬ್ಧವಿಲ್ಲ. ಈ ಮಲ್ಲಣಾರ್ಯರ ಮಗನೇ ತೋಂಟದ ಸಿದ್ಧಲಿಂಗ ಶಿವಯೋಗಿಗಳನ್ನು ಕುರಿತ ಸಿದ್ಧೇಶ್ವರ ಪುರಾಣವನ್ನು ಬರೆದಿದ್ದಾನೆ. ಇವರೆಲ್ಲ ೧೨ನೇ ಶತಮಾನದಲ್ಲಿ ಆಗಿ ಹೋದ ಅಮರಗೊಂಡ ಮಲ್ಲಿಕಾರ್ಜುನ ಪರಂಪರೆಯವರೇ ಆಗಿದ್ದಾರೆ. ಆದ್ದರಿಂದ ಈ ಮನೆತನ ೧೨ನೇ ಶತಮಾನದಿಂದ ವಿದ್ವತ್ಪರಂಪರೆಗಳಿಗೆ ಖ್ಯಾತಿಪೆತ್ತುದೆಂದು ಹೇಳುವಲ್ಲಿ ಯಾವ ಸಂಶಯವೂ ಇಲ್ಲ.

ವಾತುಲಾಗಮಕ್ಕೆ ಟೀಕೆಯನ್ನು ಬರೆದ ಗುಬ್ಬಿಯ ಮಲ್ಲಣ್ಣನೇ ತನ್ನ ಕಾಲದಲ್ಲಿ ಶ್ರಿ ಸಿದ್ಧಗಂಗೆಯಲ್ಲಿ ಶಿವಯೋಗಾನುಷ್ಠಾನ ನಿರತರಾಗಿದ್ದ ಹರಪ್ಪನಹಳ್ಳಿಯ ನಿರಂಜನ ಜಗದ್ಗುರು ಪೀಠಾಧೀಶರೂ, ತೋಂಟದ ಸಿದ್ಧಲಿಂಗೇಶ್ವರರ ಗುರುಗಳಾದ. ಶ್ರೀ ಚೆನ್ನಬಸವೇಶ್ವರರನ್ನು ಗುಬ್ಬಿಗೆ ಕರೆದೊಯ್ದು ಅವರಿಂದ ಅನುಗ್ರಹ ದೀಕ್ಷೆಯನ್ನು ಪಡೆದು ಅಲ್ಲಿ ಅವರ ಉತ್ಸವನ್ನು ೭೨ ಬಿರುದಾವಳಿ ಸಮೇತಮಾಡಿಸಿದನು. ಚನ್ನ ಬಸವೇಶ್ವರರು ಆ ಕಾಲದಲ್ಲಿ ವಾರ್ಧಕ್ಯ ಹೊಂದಿದ್ದು ಕೆಲಕಾಲಾಂತರ ಗುಬ್ಬಿಯಲ್ಲೇ ಲಿಂಗೈಕ್ಯರಾದರು.

ವೀರಶೈವಾಮೃತ ಮಹಾ ಪುರಾಣವನ್ನು ಬರೆದ ಮಲ್ಲಣಾರ್ಯರು ಬಾಲ್ಯದಿಂದಲೂ ವಿದ್ವತ್ತು ಮತ್ತು ಪ್ರತಿಭೆಗಳನ್ನು ಸಂಪಾದಿಸಿದ ಅದ್ಭುತ ಚೇತಸ್ಸುಳ್ಳವರು. ಬಾಲ್ಯದಲ್ಲಿ ಸಪ್ಪೆಯಲಿಂಗಣಾರ್ಯರಲ್ಲಿ ವಿದ್ಯಾಭ್ಯಾಸ ಮಾಡಿ ಶಿವಗಂಗೆಯ ಮೇಲಣ ಗವಿಯ ಸಿಂಹಾಸನಾಧೀಶರಾದ ಶಾಂತನಂಜೇಶ್ವರನ ಅನುಗ್ರಹಕ್ಕೆ ಪಾತ್ರನಾದವನು. 'ಕರ್ನಾಟಕ ಸಂಸ್ಕೃತೋಭಯ ಕವಿತ್ವಂಗಳಂ ಪೂರ್ಣಲಕ್ಷಣ ಚಮತ್ಕಾರದಿಂದಂ ಮಾಳ್ಪ ನಿರ್ಣಯಕೆ ನೀನೆಯಗ್ಗಳವಲಾ ! ಬಸವಪೌರಾಣಾರ್ಥವಂ ಪೇಳ್ವೊಡೆ ಅರ್ಣವ ಪ್ರಾಂತದ ಭೂಮಿಯೊಳು ಪೆಸರಾಗಿರ್ದೆ' ಎಂದು ಜನತೆಯಲ್ಲ ಹೊಗಳುತ್ತಿದ್ದರು. ಅಂತೆಯೇ ಶೀಲವಂತಾರ್ಯನ ಶಿಷ್ಯನ ಹಲಗೆಯಾಚಾರ್ಯನು ತನ್ನ ಶಿಷ್ಯನಾದ ಕೆಂಚವೀರನಿಗೆ ಬೋಧಿಸಿದ ಉಪದೇಶವನ್ನು ತಾನು ವೀರಶೈವಾಮೃತ ಮಹಾಪುರಾಣವೆಂಬ ಹೆಸರಿಟ್ಟು ವಾರ್ಧಕಷಟ್ಪದಿಯಲ್ಲಿ ಬರೆದ ಹಾಗೆ ಹೇಳಿಕೊಂಡಿದ್ದಾನೆ. ಪೂರ್ವದಲ್ಲಿ ಲಕ್ಕಣ್ಣ ದಂಡನಾಯಕರು, ಭಂಡಾರಿ ಜಕ್ಕಪ್ಪ, ಕಲ್ಲಹದಕೇತಿಸೆಟ್ಟಿ ಮೊದಲಾದವರು ಲಕ್ಷ ಸಂಖ್ಯೆಯ ದ್ರವ್ಯವನ್ನು ವೆಚ್ಚಮಾಡಿಸಿ ಕಾವ್ಯಾದಿಗಳನ್ನು ಬರೆಸಿದರು. ಎಂಬುದು ಹೆಚ್ಚಲ್ಲ. ನಿಸ್ಪೃಹನಾಗಿ ಯಾವ ಯಾವ ಪ್ರತ್ಯಾಸೆಗಳನ್ನು ಇಟ್ಟುಕೊಳ್ಳದೆ ಈ ವೀರಶೈವಾಮೃತ ಮಹಾಪುರಾಣವನ್ನು ಮಾಡಿ ಮಾಹೇಶ್ವರರ ಕೃಪೆಗೆ ಪಾತ್ರನಾದ ಮಲ್ಲಣನ ಭಾಗ್ಯಕ್ಕೆ ಎಣೆಯಿಲ್ಲವೆಂದು ಎಲ್ಲರೂ ಕವಿಯನ್ನು ಹೊಗಳಿದ್ದಾರೆ. ಈ ಕವಿಯು ಬಸವಪುರಾಣದ ಅರ್ಥವನ್ನು ಹೇಳುವಲ್ಲಿ ಅದ್ಭುತ ಶಕ್ತಿ ಸಂಪನ್ನನಾಗಿದ್ದನೆಂದು ದೇಶದಲೆಲ್ಲ ಪ್ರಖ್ಯಾತನಾಗಿದ್ದನು. ಇವನನ್ನು ಚೇರಮಕವಿಯು ತನ್ನ ಚೇರಮಕಾವ್ಯದಲ್ಲಿ 'ವೇದಾಂತ ಸಿದ್ಧಾಂತ ಲಕ್ಷಣ, ವೈದ್ಯ, ಭರತ, ಸಾಮುದ್ರಿಕ, ಜ್ಯೋತಿಷ್ಯ, ಅಲಂಕಾರ, ಸರಸಸಂಗೀತಂ, ವಾದ್ಯ, ಶಕುನ, ಸರ್ವ್ವಾಕರಣ, ಸೂಪ, ರತಿ, ಶಾಸ್ತ್ರ'ದೊಳಗೆ ಪರಿಣಿತನೆಂದು ಹೊಗಳಿರುವುದರಿಂದ ಇತರ ಅನೇಕ ಶಾಸ್ತ್ರಗಳ ಜ್ಞಾನವೂ ಇವನಿಗಿತ್ತೆಂದು ಊಹಿಸಬಹುದು.

ವೀರಶೈವ ಮಹಾಮೃತ ಪುರಾಣವೇನು ಬಡಪೆಟ್ಟಿನ ಸಾಮಾನ್ಯ ಕೃತಿಯೆಂದು ಭಾವಿಸುವಂತಿಲ್ಲ. ಎಂಟು ಕಾಂಡಗಳನ್ನು ೧೩೬ ಸಂಧಿಗಳಾಗಿ ವಿಂಗಡಿಸಿ ೭೧೦೨ ವಾರ್ಧಕಷಟ್ಪದಿಗಳ ಹರವಿನಲ್ಲಿ ವಿಸ್ತಾರಗೊಂಡಿದೆ. ಇದರಲ್ಲಿ ವೇದಾಗಮೋಪನಿಷತ್ ಪುರಾಣಾದಿಗಳಿಂದ ಕೊಟ್ಟ ಪ್ರಮಾಣವಾಕ್ಯಗಳು ಒಟ್ಟು ೮೦೦. ವೀರಶೈವಾಮೃತ ಪುರಾಣವು ವ್ಯಕ್ತಿಪ್ರಧಾನವಾದ ಒಂದು ಕಥಾ ಭಾಗವಾಗಿರದೆ ವೀರಶೈವ ಧರ್ಮ-ಸಮಾಜ-ನಡೆ-ನುಡಿಗಳಿಗೆ ಸಂಬಂಧಿಸಿದ ತತ್ವಪ್ರತಿಪಾದನೆಮಾಡುವ ಪುರಾಣ. ಉಪನಿಷತ್ತುಗಳೇಮೊದಲಾದ ಕಥಾಭಾಗಗಳಿಂದ ತುಂಬಿ ತುಳುಕುವ ಒಂದು ಮಹಾಸಾಗರವಿದ್ದ ಹಾಗೆ. ತಾತ್ವಿಕ ಜಿಜ್ಞಾಸೆಯು ಪುರಾಣ ಕಥಾ ಭಾಗಗಳ ಹಿನ್ನೆಲೆಯಲ್ಲಿ ರಮ್ಯವಾಗಿ ಪ್ರತಿಪಾದನೆಮಾಡಿದ ಬೃಹತ್ಕೃತಿಯಾಗಿದೆ.

ವಸ್ತುವಿನ್ಯಾಸದಲ್ಲಿ ವೀರಶೈವ ಧಾರ್ಮಿಕ ಕೃತಿಗಳಾದ ಶಿವತತ್ವ ಚಿಂತಾಮಣಿ, ಚನ್ನಬಸವ ಪುರಾಣ ವೀರಶೈವಾಮೃತ ಪುರಾಣಗಳನ್ನು ಒಂದು ವರ್ಗಕ್ಕೆ ಸೇರಿಸಬಹುದು. ಕಾರಣವೇನೆಂದರೆ ಈ ಗ್ರಂಥಗಳಲ್ಲಿ ಬಂದಿರುವ ವೀರಶೈವ ತತ್ವಬೋಧೆ, ಇದಕ್ಕೆ ಹಿನ್ನೆಲೆಯಾದ ಪರಮೇಶ್ವರನ ಪಂಚವಿಂಷತಿ ಲೀಲೆಗಳ ಕಥನ, ಅನೇಕ ಪುರಾತನರ ಸಂಕ್ಷೇಪ ಕಥಾ ಸಗ್ರಹಣೆ, ಸಮಕಾಲೀನ, ಪ್ರಾಚೀನ ನೂತನ ಪುರಾತನರ ಸಂಕ್ಷೇಪ ಕಥನ ಪೂರ್ವಕ ನಾಮನಿರ್ದೇಶನ ಮೊದಲಾದವುಗಳೇ ಆಗಿವೆ. ಆದರೆ ವೀರಶೈವಾಮೃತ ಮಹಾಪುರಾಣದ ಹರವು ಮೇಲೆ ತಿಳಿಸಿದ ಎರಡೂ ಕೃತಿಗಳಿಗಿಂತ ಬಹಳ ವಿಸ್ತಾರವಾದುದು. ಸಂಗ್ರಹಣೆಯೂ ಅನಂತ. ವಿರೂಪಾಕ್ಷನ ಚನ್ನಬಸವ ಪುರಾಣಕ್ಕೆ ಅನೇಕ ವಿಷಯಗಳು ಇಲ್ಲಿಂದಲೇ ಹೋಗಿರಲು ಸಾಧ್ಯವಿರುವಂತಿದೆ. ಈ ಪುರಾಣದಲ್ಲಿ ಚಿಂತಾಮಣಿಯಲ್ಲಿಲ್ಲದ ಗುರುಶಿಷ್ಯ ಸಂಬಂಧವನ್ನು ಕಾಣಬಹುದು. ಕಾವ್ಯಾರಂಭದಲ್ಲಿ ಪರತತ್ತ್ವ ಸ್ವರೂಪವನ್ನು ಮುಂದೆ ಚೈತನ್ಯ ಜಂಗಮ ಮೂರ್ತಿಯನ್ನು ವಿವರಿಸಿ. ಚರಾಚರ ಸೃಷ್ಟಿಗೆಲ್ಲ ಈ ಮೂರ್ತಿ ಮೂಲವೆಂಬುದನ್ನು ಆ ಸೃಷ್ಟಿಕ್ರಮದಲ್ಲಿ ಶಿವನ ಇಪ್ಪತ್ತೈದು ಲೀಲೆಗಳನ್ನು ಮಲ್ಲಣಾರ್ಯರು ವಿಸ್ತಾರವಾಗಿ ವಿವರಿಸುತ್ತಾರೆ. ಪೀಠಿಕಾ ಸಂಧಿಯಲ್ಲಿ ವಸ್ತುಕದಹಾಗೆ ಸಮುದ್ರ ಕೈಲಾಸಾದಿವರ್ಣನೆಗಳನ್ನು ಮಲ್ಲಣ್ಣ ಕೈ ಬಿಟ್ಟುದೊಂದು ವಿಶೇಷ.

ಕೆಂಚವೀರನೆಂಬ ಭಕ್ತನು ತನ್ನ ಗುರುವಾದ ಶಾಂತನಂಜೇಶ್ವರನ ಬಳಿಗೆ ಹೋಗಿ 'ಚಿದ್ರೂಪ ನಿರ್ಮಲಾಧಾರ ಜಂಗಮ ಲಿಂಗದಾದಿಮಧ್ಯಾಂತವ ಅರಿವ ಇಚ್ಛೆಯಾಗಿಪ್ಪದು ಅನುಗ್ರಹಿಸಬೇಕೆಂದು ಬೇಡುತ್ತಾನೆ. ಆಗ ಅವನು ಸಾಕ್ಷಾತ್ ಪರಶಿವಮೂರ್ತಿ ಹಲಗೆಯಾಚಾರ್ಯನ ಬಳಿಗೆ ಕರೆತಂದು ಹಿಂದೆ ಶೀಲವಂತಾರ್ಯ ಗುರುವು ತನಗೆ ಕರುಣಿಸಿದ ನಿರೂಪವನ್ನೇ ತಿಳಿಸುವುದಾಗಿ ತಿಳಿಸುತ್ತ, ವೀರಶೈವ ಸಿದ್ಧಾಂತಾನ್ವಯ ವಚನಕಾರರ ಸೃಷ್ಟಿಯ ವಚನಗಳ ಆಧಾರವನ್ನೇ ಬಳಸಿಕೊಂಡು ಸೃಷ್ಟಿಕ್ರಮವನ್ನು ಹೇಳುತ್ತ ಅದಕ್ಕೆ ಉಪನಿಷತ್ ವಾಕ್ಯಗಳನ್ನು ಹೇಳುತ್ತ, " ಶಿವನೇ ಭಕ್ತಂಕಣಾ ತದ್ಭಕ್ತನೇ ಶಿವಂತಾನಾದ ತೆರಂ ಒರೆವೆಕೇಳ್ ಆ ಭಕ್ತನೇಶಿವಂ ಭಾವಿಸುವೊಡೆ ಎರಡು ಕೂಡಿದೊಡಂತದೇ ಜಂಗಮುಂಕಣಾ " ಎಂಬ ವಿವರಣೆ ನೀಡುತ್ತಾನೆ. ಕ್ರಮವಾಗಿ ಗುರು-ಲಿಂಗ-ಜಂಗಮರೇ ಮೊದಲಾದ ಅಷ್ಟಾ

ವರಣವನ್ನು ಹೇಳಿ ಮುಂದೆ ಜಂಗಮದ ಮಹತ್ತು ಬೃಹತ್ತುಗಳ ವರ್ಣನೆ ನೀಡುತ್ತಾನೆ.

ತದನಂತರ ಮಹೇಶ್ವರನ ಇಪ್ಪತ್ತೈದು ಲೀಲೆಗಳ ಕಥೆಗಳಿಗೆ ತಾನು ತೆಗೆದುಕೊಂಡ ಆಕರ ಗ್ರಂಥಗಳಾದ 'ಸ್ವಾತ್ಮಯೋಗಪ್ರದೀಪಿಕೆ' ಶತರತ್ನ ಇತ್ಯಾದಿಗ್ರಂಥಗಳ ಹೆಸರು ಹೇಳುತ್ತಾನೆ. ಮುಂದೆ ಬಸವಣ್ಣನೇ ಮೊದಲಾದ ಶರಣರ ಅವತಾರವನ್ನು ತಿಳಿಸುತ್ತ ಬಸವಣ್ಣ ಶ್ರೀ ಶೈಲದ ಪಂಡಿತಾರಾಧ್ಯರ ಜೀವನ ಚರಿತ್ರೆಗಳನ್ನು ಬಸವಪುರಾಣವನ್ನು ಅನುಸರಿಸಿ ಹೇಳಿರುವುದು ಕಂಡು ಬರುವುದು. ಬಸವ ಪುರಾಣವನ್ನು ಕರತಲಾಮಲಕ ಮಾಡಿಕೊಂಡಿದ್ದ ಈ ಕವಿ ಉತ್ತಮ ಶೈಲಿಯಲ್ಲಿ ಈ ಕಥೆ ನಿರೂಪಿಸುತ್ತ ಷಟಸ್ಥಲ ನಿರ್ಣಯವನ್ನು ಬಸವಣ್ಣನವರೇ ಮಾಡಿದರೆಂದು ತಿಳಿಸುತ್ತಾನೆ. ಈ ದೃಷ್ಟಿಯಿಂದ ವೀರಶೈವ ಮತಸ್ಥಾಪಕನು ಬಸವಣ್ಣನೇ ಎಂಬುದು ಕವಿಯ ಅಭಿಮತ.

ಇವನ ಪದ್ಯದ ರಚನಾ ಸಾಮರ್ಥ್ಯ ಅದ್ಭುತವಾದುದು. ಬೃಹತ್ಕೃತಿಯಾದ ಇದರಲ್ಲಿ ಪುನರುಕ್ತಿಗಳು ಬರುವುದು ಅನಿವಾರ್ಯವೇ. ಭಿಕ್ಷಾಟನಾಲೀಲೆಯಲ್ಲಿ ಈಶ್ವರನು ಅಮರಾವತಿಗೆ ಬರುವ ಪ್ರಸಂಗ ಮನೋಜ್ಞವಾಗಿದೆ. ಈಶ್ವರನ ನಿರತಿಶಯರೂಪಾದಿಗಳನ್ನು ಕಂಡು ದೇವತಾ ಸ್ತ್ರೀಯರ ಅವಸ್ಥೆಯಲ್ಲಿ ವಿಪ್ರಲಂಭ ಶೃಂಗಾರವನ್ನು ವರ್ಣಿಸುವ ಕವಿಯ ಜಾಣ್ಮೆಮೆಚ್ಚತಕ್ಕದ್ದು. ಜಲಂದರ ಲೀಲೆಯಂತೂ ಮನೋಜ್ಞವಾಗಿ ಮೂಡಿಬಂದಿದೆ. ಚೆನ್ನಬಸವ ಪುರಾಣದಲ್ಲಿ ವಿಸ್ತಾರವಾಗಿ ಬರುವ ಈ ಲೀಲೆಯ ಕಥೆಗಳಿಗೂ ಮಲ್ಲಣಾರ್ಯರು ನಿರೂಪಿಸಿದ ಕಥೆಗಳಿಗೂ ಅನೇಕ ವ್ಯತ್ಯಾಸಗಳು ಕಂಡು ಬರುತ್ತವೆ. ಕೆಲವು ಕಡೆ ಹೋಲಿಕೆಯಿದೆ.

ಒಟ್ಟಿನಲ್ಲಿ ವೀರಶೈವಾಮೃತ ಮಹಾಪುರಾಣವು ವೀರಶೈವ ಸಂಸ್ಕೃತಿ ಸಾಹಿತ್ಯದೃಷ್ಟಿಯಿಂದ ಒಂದು ವಿಶ್ವಕೋಶವಿದ್ದಹಾಗೆಯೇ, ಇದೊಂದು ಮಹಾಸಾಗರವಿದ್ದಹಾಗೆ. ಸಾಹಿತ್ಯ ಚರಿತ್ರೆ ಪುರಾಣ ಸಿದ್ಧಾಂತ ವೇದಾಂತಾದಿ ಶಾಸ್ತ್ರವಿಚಾರಗಳನ್ನು ಕಾವ್ಯಮುಖದಲ್ಲಿ ಹೇಳಿದ ಲಸತ್ಕವಿ ಮಲ್ಲಣಾರ್ಯರ ಈ ಮಹಾ ಸಾಹಸಕ್ಕೆ ಓದುಗ ಮೂಕವಿಸ್ಮಿತನಾಗುತ್ತಾನೆ. ಈ ಪುರಾಣದಲ್ಲಿ ಪರತತ್ವಸ್ವರೂಪವರ್ಣನೆ, ಸೃಷ್ಟಿಯಕ್ರಮ, ಅಷ್ಟಾವರಣ ಷಟ್‌ಸ್ಥಲ, ಪಂಚಾಚಾರಗಳು, ಪಂಚವಿಂಶತಿ ಲೀಲೆ, ಶಿವಾಧಿಕ್ಯ ಸ್ಥಾಪನೆ, ಪುರಾಣಗಳೊಳಗಿನ ಅನೇಕ ಕಥೆಗಳು, ಅದ್ವೈತ ವೇದಾಂತ, ಶೈವಸಿದ್ಧಾಂತ ಬಸವಾದಿ ಪ್ರರಾತನರು ಅರುವತ್ತುಮೂವರು ಪುರಾತನರು. ನೂತನಪುರಾತನರು, ವಿರಕ್ತರು ಆಗಿನಕಾಲದ ಶರಣರು, ಪವಾಡಪುರುಷರು, ಪವಾಡಗಳು, ಹದಿನೆಂಟು ಯುಗಗಳ ರಾಜರು ಮೇಲೇರಿದ ಕಥೆಗಳೇ ಮೊದಲಾದವುಗಳಿಂದ ಬೀಗಿ ಬಳುಕಿನಿಂತ ಮಹಾಕಥಾನಕ. ಈ ದೃಷ್ಟಿಯಿಂದಲೇ ಇದನ್ನು ವೀರಶೈವರ ವಿಶ್ವಕೋಶವೆನ್ನಬೇಕಾಯಿತು.

ಇಂಥ ಒಂದು ಶ್ರೇಷ್ಠಕೃತಿಯ ಸಮಗ್ರವಲ್ಲದಿದ್ದರೂ ಸ್ಥೂಲವಾದ ಒಂದು ದಿಗ್ದರ್ಶನವನ್ನು ಸಿದ್ಧಗಂಗಾ ಪತ್ರಿಕೆಯ ಓದುಗರಿಗೆ ಮಾಡಿಕೊಡಬೇಕೆಂಬುದೇ ಪ್ರಕೃತ ಕಿರುಲೇಖನದ ಉದ್ದೇಶ.

ಹೊಲೆಯರ ಬಾವಿಯಲೊಂದು ಎಲು ನೆಟ್ಟಿದ್ದರೆ
ಹೊಲೆ ಹೊಲೆಯೆಂಬುದೀ ಲೋಕವೆಲ್ಲಾ
ಹಲವೆಲುವಿದ್ದ ಬಾಯಲ್ಲಿ ಒಲವರವ ನುಡಿದರೆ ಅದು
ಹೊಲೆಯರ ಬಾವಿಯಿಂದ ಕರಕಷ್ಟ ಕಣಾ ರಾಮನಾಥ

— ದಾಸಿಮಯ್ಯ

ನೆಲದಡಿಯ ನೀರು

—ಎ. ಎಸ್. ಪ್ರಕಾಶ್, ಎಂ ಎಸ್.ಸಿ. ಪಿ ಜಿ.ಡಿಪ್.
ಸಹಾಯಕ ಭೂವಿಜ್ಞಾ, ಗಣಿ ಮತ್ತು ಭೂವಿಜ್ಞಾನ ಇಲಾಖೆ.

ಮನುಷ್ಯನಿಗೆ ಮಳೆಯ ನೀರಿನಂತೆ ನೆಲದಡಿಯ ನೀರಿನ ಆವಶ್ಯಕತೆಯೂ ತುಂಬಾಇದೆ. ಇಂಥ ಭೂಜಲ ಸಮೀಕ್ಷಣೆಯ ವಿಚಾರವನ್ನು ರೈತರು ತಿಳಿಯುವುದು ಅತ್ಯಾವಶ್ಯಕ. ಅದನ್ನು ಮಾನ್ಯ ಲೇಖಕರು ತಿಳಿಸಿಕೊಟ್ಟಿರುತ್ತಾರೆ.

—ಸಂ

ಅನ್ನದಷ್ಟೆ ಆವಶ್ಯಕ ನೀರು. ಬಾಯಾರಿಕೆಯನ್ನು ಹಿಂಗಿಸಿಕೊಳ್ಳುವುದರಿಂದ ಹಿಡಿದು ವ್ಯವಸಾಯ ಮತ್ತು ಕೈಗಾರಿಕೆಗಳವರೆವಿಗೂ ನೀರು ಅತ್ಯವಶ್ಯಕ. ನೆಲದಡಿಯ ನೀರು ಎಂದೊಡನೆ ನಮ್ಮ ಕಣ್ಣೆದುರು ಬಾವಿಗಳು ಬಂದು ನಿಲ್ಲುವುದು ಸಹಜ. ಮನುಜನಿಗೆ ನೆಲದಡಿಯ ನೀರಿನ ನಂಟು ಬಹಳ. ಆದಿಮಾನವರು ಹಾಗೂ ಕೆಲವು ಪ್ರಾಣಿಗಳು ನದಿಗಳು ಬತ್ತಿದಾಗ, ನದಿಬಯಲಿನ ಉಸುಕಿನಲ್ಲೆ ಗುಂಡಿಗಳನ್ನು ತೋಡಿ ನೆಲದಡಿಯ ನೀರಿಗೆ ಶರಣಾಗಿದ್ದಾರೆ. ಇತ್ತೀಚಿನ ಅನಾವೃಷ್ಟಿಗಳಿಂದ ಮನುಜನಿಗೆ ಮಳೆಯ ನೀರಿನ ಅವಲಂಬನೆಗಿಂತ ನೆಲದಡಿಯ ನೀರಿನ ಬಳಕೆಯಲ್ಲಿ ವಿಶ್ವಾಸ ಹೆಚ್ಚಿದೆ. ನೆಲದಡಿಯ ನೀರು, ಭೂಮಿಯ ಒಟ್ಟು ಬಳಸಲು ಯೋಗ್ಯವಾದ ನೀರಿನ ಶೇಕಡ 99 ಭಾಗವಾದರೆ, ಮಿಕ್ಕ ಶೇಕಡ ಒಂದು ಭಾಗವನ್ನು ಕೆರೆ, ಸರೋವರ, ನದಿಯ ನೀರು ಆಕ್ರಮಿಸಿದೆ. ಆದುದರಿಂದ ನೆಲದಡಿಯ ನೀರಿಗೆ ಮಾನವ ಮೊರೆ ಹೋಗುವುದು ಅನಿವಾರ್ಯವಾಗಿದೆ.

ಹನಿಗೆ ಹನಿ ಕೂಡಿ, ಹಳ್ಳ, ಕೆರೆ, ನದಿ ಮತ್ತು ಸಮುದ್ರವಾಗುತ್ತದೆ. ಆದರೆ ಭಾವಿಗಳಿಗೆ? ಮಳೆಯ ನೀರಿನ ಮುಕ್ಕಾಲು ಭಾಗ ಬಿಸಿಲಿಗೆ ಆವಿಯಾಗಿ ವಾತಾವರಣ ಸೇರುತ್ತದೆ. ಇನ್ನುಳಿದ ಕಾಲುಭಾಗ ನೆಲದಲ್ಲಿ ಇಂಗಿ, ನೆಲದಡಿಯ ನೀರಾಗಿ ಸಂಗ್ರಹವಾಗುತ್ತದೆ. ಇದೇ ನೀರು ನೆಲಗಳ ಮೂಲಕ ಭಾವಿಗಳಿಗೆ ಹರಿದು ಬರುವುದು. ಈ ನೀರು ಖನಿಜಗಳಿಂದ ಕೂಡಿರುವುದರಿಂದ ಅದರಲ್ಲಿ ಅನೇಕ ಸತ್ವಯುತ ಗುಣಗಳು ಉಂಟಾಗುವುದು. ಈ ನೀರು ಶಿಲೆ ಮತ್ತು ಮೃತ್ತಿಕೆಯಲ್ಲಿನ ಖನಿಜಗಳ ಮೂಲಕ ಹರಿದು ಶುದ್ಧವಾಗುವುದು ಮತ್ತು ಶುಚಿಯಾಗುವುದು.

ನೆಲದಡಿಯ ನೀರಿಗೆ, ಅಂತರ್ಜಲ ಅಥವಾ ಭೂಗತಜಲವೆಂದೂ ಹೇಳುವರು. ಈ ಭೂಗತ ಜಲದ ಸಂಗ್ರಹಕ್ಕೆ ಇತಿ ಮಿತಿ ಇದೆ. ಆದುದರಿಂದ ಇದನ್ನು ಬಳಸುವಾಗಲೂ ಇತಿ-ಮಿತಿಯಿಡಬೇಕಾದ ಅಗತ್ಯವಿದೆ. ನೆಲದಡಿಯ ಎಲ್ಲೆಡೆಯಲ್ಲಿಯೂ ನೀರು ದೊರಕುವುದೆ? ಹೌದು. ಆದರೆ ಅದರ ಪ್ರಮಾಣ ಮತ್ತು ದೊರೆಯುವ ಆಳ, ಒಂದು ಜಾಗದಿಂದ ಮತ್ತೊಂದು ಜಾಗಕ್ಕೆ ಬೇರೆ ಬೇರೆಯಾಗಿರುವುದು. ಯಾವುದೇ ಜಮೀನಿನಲ್ಲಿ ಬಾವಿ ತೋಡಲು ಸೂಕ್ತವಾದ ಜಾಗ ಮತ್ತು ಕನಿಷ್ಠ ಆಳ ಮುಂತಾದ ವಿವರಗಳನ್ನು ವೈಜ್ಞಾನಿಕ ತಾಂತ್ರಿಕ ಸಲಹೆ ಸೂಚನೆಗಳ ಮೇರೆಗೆ ಗೊತ್ತುಪಡಿಸಬಹುದು. ಮೇಲ್ಕಂಡ ವಿಷಯಗಳ ನಿರ್ಧಾರಕ್ಕೆ ಕೆಳಗಿನ ಸಂಗತಿಗಳನ್ನು ಲಕ್ಷಿಸಬೇಕು.

1. ಸ್ಥಳವರ್ಣನೆ 2. ಆ ಪ್ರದೇಶದ ಶಿಲೆಗಳ ಗುಣಗಳು 3. ಶಿಥಿಲೀಕರಣಗೊಂಡ ವಲಯದ ಮಂದತೆ 4. ಭೂರಚನಾಕ್ರಯ 5. ಅಂತರ್ಜಲ ಮಟ್ಟದಲ್ಲಿ ಕಾಲ ಕಾಲಕ್ಕೆ ಆಗುತ್ತಿರುವ ಏರಿಳಿತಗಳು ಹಾಗೂ 6. ಬಾವಿ ತೋಡುವುದಕ್ಕೆ ಬಳಸುವ ಸಾಧನ ಸಲಕರಣೆಗಳ ಬೆಲೆ ಹಾಗೂ ವೆಚ್ಚದ ಅಂದಾಜು. ಮೇಲ್ಕಂಡ ವಿಚಾರಗಳನ್ನು ಭೂಜಲ ಸಮೀಕ್ಷಣೆಗೆ ಒಳಪಡಿಸಿ ವಿಮರ್ಶಿಸಿ ನಿರ್ಧರಿಸಬೇಕಾದುದು ಅತ್ಯಗತ್ಯ. ಈ ವಿಚಾರವನ್ನು ರೈತರು ಅರಿಯುವುದು ಅತ್ಯವಶ್ಯ.

ಆಳವಾದ-ಅಗಲವಾದ ಬಾವಿಗಳ ಕಲ್ಪನೆ ನಮ್ಮಲ್ಲಿ ಸಾಮಾನ್ಯವಾಗಿ ರೂಢಿಯಲ್ಲಿದೆ. ಇತ್ತೀಚೆಗೆ

ಕೊಳವೆ ಬಾವಿಗಳು ಸಹ ಜನಪ್ರಿಯತೆಯನ್ನು ಗಳಿಸುತ್ತಿವೆ. ಬಾವಿ ಅಗಲವಾಗಿ ಆಳವಾಗಿ ಇದ್ದಷ್ಟು ಅದರಲ್ಲಿಯ ನೀರಿನ ಸಂಗ್ರಹ ಹೆಚ್ಚುವದೆಂಬುದು ಸಹಜವಾಗಿದೆ. ಇದ್ದುದ್ದನ್ನೆಲ್ಲಾ ಬಾವಿ ತೋಡುವುದರಲ್ಲೆ ವ್ಯಯಮಾಡುವ ಸಾಹಸಕ್ಕಿಳಿದ ರೈತ ಸಾಕಷ್ಟು ಅಂತರ್ಜಲವನ್ನು ಪಡೆಯುವುದರಲ್ಲಿ ವಿಫಲನಾದರೆ ಅವನ ವ್ಯವಸಾಯ ಹೇಗೆ ತಾನೆ ಸಾಗೀತು? ಮಳೆಯ ಕಡೆ ಮೋರೆಮಾಡಿ ಕೈಕಟ್ಟಿಕೊಂಡು ಕುಳಿತುಕೊಳ್ಳಬೇಕಾಗುವುದು.

ಇಂತಹ ಸಂಕಟಗಳಿಂದ ಪಾರುಮಾಡಲು ಸರಕಾರವು ಬೇರೆ ಬೇರೆ ವ್ಯವಸ್ಥೆಗಳನ್ನು ಮಾಡಿದೆ. ಬೆಂಗಳೂರು ಮತ್ತು ಇತರ ಜಿಲ್ಲಾ ಕೇಂದ್ರಗಳಲ್ಲಿರುವ ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ಸೇರಿದ ಅಂತರ್ಜಲ ವಿಭಾಗ, ಭೂಗತಜಲದ ಬಗ್ಗೆ ಸೂಕ್ತ ಸಲಹೆಗಳನ್ನು ಕೊಡುತ್ತಿದೆ. ಸಲಹೆಯನ್ನು ಯಾಚಿಸುವ ರೈತರು ಸಂಬಂಧಪಟ್ಟ ಜಿಲ್ಲೆಯ ಗಣಿ ಮತ್ತು ಭೂವಿಜ್ಞಾನ ಇಲಾಖೆಯ, ಭೂವಿಜ್ಞಾನಿಯವರಿಗೆ ಅರ್ಜಿ ಹಾಕಿಕೊಳ್ಳಬೇಕು. ಗೊತ್ತುಪಡಿಸಿದ ತಾರೀಖಿನಂದು ಅರ್ಜಿದಾರನ ಜಮೀನಿಗೆ ಸಂಬಂಧ ಪಟ್ಟ ಅಧಿಕಾರಿಗಳು ಭೇಟಿಯಿತ್ತು ವೈಜ್ಞಾನಿಕ ಸಮೀಕ್ಷಣೆ ನಡೆಸಿ ಬಾವಿ ತೋಡಲು ಸೂಕ್ತವಾದ ಜಾಗವನ್ನು ಮತ್ತು ಕನಿಷ್ಠ ಆಳವನ್ನು ತಿಳಿಸುವರು. ಅಂತರ್ಜಲ ಇಲಾಖೆಯ ಸಲಹೆಯ ಲಾಭ ಪಡೆದು ಬಾವಿಯ ನೀರನ್ನು ಹೆಚ್ಚು ಉಪಯುಕ್ತವಾಗಿ ಬಳಸಿ ಹೆಚ್ಚಿನ ಲಾಭ ಗಳಿಸಬಹುದಾಗಿದೆ.

ತೋಡಿದ ಬಾವಿಗಳಲ್ಲಿ ಸಾಕಷ್ಟು ನೀರು ಇಲ್ಲದಿರುವಾಗ ಇಂತಹ ವೈಜ್ಞಾನಿಕ ತಾಂತ್ರಿಕ ಸಲಹೆ ಪಡೆದು, ತೋಡುಬಾವಿಯ ತಳದಲ್ಲಿ ಕೊಳವೆ ಬಾವಿಗಳನ್ನು ಹಾಕಿದಲ್ಲಿ ನೀರಿನ ಸಂಗ್ರಹ ಹೆಚ್ಚಲು ಅನುವಾಗುವುದು. ಹೆಚ್ಚು ನೀರು ದೊರೆತರೆ ಉತ್ತಮ ಬೆಳೆ ಕೈ ತುಂಬಾ ಫಸಲು. ಇತ್ತೀಚೆಗೆ ಕೊಳವೆ ಬಾವಿಗಳು ರೈತರಲ್ಲಿ ಹೆಚ್ಚು ಜನಪ್ರಿಯವಾಗುತ್ತಿದೆ. ನೀರಾವರಿಯ ಅಗತ್ಯವನ್ನು ಪೂರೈಸಬಲ್ಲ ಸಾಮರ್ಥ್ಯವನ್ನು ಕೊಳವೆ ಬಾವಿಗಳು ಪಡೆದಿವೆ. ಕುಡಿಯುವ ನೀರಿಗೆ ಹಾಗೂ ನೀರಿನ ಅಗತ್ಯಗಳಿಗಾಗಿ ಕೊಳವೆ ಬಾವಿಗಳನ್ನು ತೋಡಲಾಗುತ್ತಿದೆ.

ರೈತರಿಗೆ ಬಾವಿ ತೋಡಲು ನೆರವಾಗುವ ಅನೇಕ ಯೋಜನೆಗಳನ್ನು ಸರಕಾರ ರೂಪಿಸಿದೆ. ವೈಯಕ್ತಿಕವಾಗಿ ಲಾಭ ನೀಡಬಲ್ಲ ಯೋಜನೆಯನ್ನು ಅವರು ಆರಿಸಿಕೊಳ್ಳಬಹುದು.

●

೧) ವರ್ಧತ್ಯಧರ್ಮೇಣ ನರಸ್ತತೋ ಭದ್ರಾಣಿ ಪಶ್ಯತಿ ।
ತತಃ ಸಪತ್ನಾಞ್ಜಯತಿ ಸಮೂಲಸ್ತು ವಿನಶ್ಯತಿ ॥

ಅರ್ಥ: ಅಧರ್ಮ ಕಾರ್ಯಗಳನ್ನು ಮಾಡುವುದರಿಂದ ಮನುಷನು ಪ್ರಾರಂಭದಲ್ಲಿ ವೃದ್ಧಿಯನ್ನು ಹೊಂದುತ್ತಾನೆ. ಶ್ರೇಯಸ್ಸನ್ನು ಕಾಣುತ್ತಾನೆ. ತನ್ನ ಶತ್ರುಗಳನ್ನೂ ಜಯಿಸುತ್ತಾನೆ, ಆದರೆ ಕಟ್ಟಕಡೆಗೆ ಸರ್ವನಾಶವನ್ನೇ ಹೊಂದುತ್ತಾನೆ.

—ಮಹಾಭಾರತ-ವನಪರ್ವ

೨) ಹಿತವಂ ಮಾಡುವರ ಮಾತೆನಾವನೊರ್ವಂ ಕೇಳದೆ ಇರ್ಪನಾತಂ ಕಿಡುವಂ; ಅದು ಹೇಗೆಂದೊಡೆ-ಕಾಷ್ಠಮಂ ಬಿಟ್ಟು ಬಿರ್ದ ಸತ್ತ ಕೂರ್ಮನಹಗೆ.

—ದುರ್ಗಸಿಂಹ

ಮಹಾಮನೆಯಲ್ಲಿ ಪ್ರಸಾದ

—ಕೋರಂಬ

ತತ್ರ ತತ್ರ ಶಿವಕ್ಷೇತ್ರಂ
ತತ್ರ ತತ್ರ ನಿವಾಸಿನಾಂ
ಮೋಕ್ಷಾರ್ಥಂ ಕೃಪಾಯ ದೇವಃ
ಕ್ಷೇತ್ರಂ ಕಲ್ಪಿತವಾನ್ ಪ್ರಭುಃ ॥

ಅಲ್ಲಿನ ಅಲ್ಲಿನ ಜನಂಗಳಿ
ಅಲ್ಲಿಗೆ ಅಲ್ಲಿಗೆ ಶಿವಕ್ಷೇತ್ರಂಗಳಂ
ಮೋಕ್ಷಾರ್ಥಮಾಗಿ ದೇವ ಕರುಣಾಳು
ದಯೆಯಿಂದ ಕಲ್ಪಿಪನು ತಾನು.

ಎಂಬ ಸುಪ್ರಸಿದ್ಧ ಪುರಾಣೋಕ್ತರೀತ್ಯಾ ಜಗದ್ಧಿತಾರ್ಥವಾಗಿ ಶ್ರೀ ಗೋಸಲ ಸಿದ್ಧೇಶ್ವರರು ಸು ಕ್ರಿ.ಶ 1300–1350 ರಲ್ಲಿಯೇ ಅವಿಮುಕ್ತ ಕ್ಷೇತ್ರವಾದ ಈ ಸಿದ್ಧಗಂಗೆಯನ್ನು ಸಂಸ್ಥಾಪಿಸಿದರು. ಮುಂದೆ ಈ ಪರಂಪರೆಯಲ್ಲಿ ಬಂದ ದ್ವಿತೀಯ ಪ್ರಭುದೇವರೆನಿಸಿದ್ದ ಶ್ರೀ ಸಿದ್ಧಲಿಂಗೇಶ್ವರರು ಈ ಕ್ಷೇತ್ರದ ಅಧಿಪತಿಗಳಾದರು. ನಂತರ ಉತ್ತರದಲ್ಲಿ ಈ ಪೀಠ ಪರಂಪರೆಯಲ್ಲಿ ಬಂದು ಸಂದ ಹಾಗೂ ಸಾಂಪ್ರತ ತಪೋಧನರು ನಾಡಿನ ಜನರಲ್ಲಿ ಸರ್ವೋತ್ತಮವಾದ ಸಂಸ್ಕೃತಿ ಸದ್ಧರ್ಮಗಳ ಸಂವರ್ಧನೆಗಾಗಿ, ಆತ್ಮೋಲ್ಲಾಸಕರವಾದ ಸೌರಭ ವಾತಾವರಣವನ್ನು ಸಮಾಜದಲ್ಲುಂಟುಮಾಡುವುದಕ್ಕಾಗಿ, ಉತ್ಸವಗಳು ಮೆರವಣಿಗೆಗಳು, ಸತ್ಕಥಾಕಾಲಕ್ಷೇಪ, ಜಾತ್ರಾ ಮುಂತಾದ ಅನೇಕ ಸತ್‌ಸಂಪ್ರದಾಯಗಳನ್ನು ನಟ್ಟು ಬೆಳಸಿ ಆಚರಣೆಗೆ ತರುವುದರಲ್ಲಿ ಪ್ರವತ್ರಿತರಾದರು. ಇಂತಹುಗಳಲ್ಲಿ ಜಾತ್ರೆ ಮತ್ತು ಜಾತ್ರಾಕಾಲದಲ್ಲಿ ನಡೆಸಿಕೊಂಡು ಬಂದಿರುವ ದಾಸೋಹ ಸಂಪ್ರದಾಯಗಳು ಅಭೂತಪೂರ್ವವಾದವುಗಳು.

ಜಾತ್ರೆ ನಡೆದು ಬಂದ ದಾರಿ

ಶ್ರೀ ಕ್ಷೇತ್ರದ ತಪೋನಿಷ್ಠರಾಗಿದ್ದ ಶ್ರೀ ಅಟವೀಶ್ವರರು ಹಿಂದೆ ಶರನ್ನವರಾತ್ರಿಯ ಸಮಯದಲ್ಲಿ ಈ ಕ್ಷೇತ್ರಾಧಿಪತಿಯಾದ ಶ್ರೀ ಸಿದ್ಧಲಿಂಗೇಶ್ವರಸ್ವಾಮಿಗೆ ವಿಶೇಷವಾದ ಪೂಜೆ–ಉತ್ಸವಾದಿಗಳನ್ನು ಮಾಡುವ ಏರ್ಪಾಡನ್ನು ರೂಢಿಗೆ ತಂದರು. ಆಗ್ಯೆ ಅದೇ ಜಾತ್ರೆಯೆನಿಸುತ್ತಿತ್ತು. ನಂತರ ಆ ತಪೋಧನರ ಸಿಷ್ಯಾನುವರ್ತಿಗಳಾಗಿದ್ದ ಉದ್ಧಾನಸಿದ್ಧರು ಮಹಾಶಿವರಾತ್ರಿಯ ವೇಳೆಯಲ್ಲಿ ಶ್ರೀ ಸಿದ್ಧಲಿಂಗೇಶ್ವರ ಮೂರ್ತಿಯನ್ನು ದೊಡ್ಡರಥದಲ್ಲಿ ಕುಳ್ಳಿರಿಸಿ ಮೆರೆಸುವುದರ ಮುಖೇನ ಜಾತ್ರೆಯನ್ನೇ ವ್ಯವಸ್ಥೆಗೊಳಿಸಬೇಕೆಂಬ ಮನಸ್ಸಂಕಲ್ಪದಿಂದ ಸಾವಿರದೊಂಭೈನೂರ ಹತ್ತನೆಯ (1910) ಇಸ್ವಿಯ ಶಿವರಾತ್ರಿಯಲ್ಲಿ ಈ ಸಂಪ್ರದಾಯವನ್ನು ಮೊದಲಬಾರಿಗೆ ಪ್ರಾರಂಭಿಸಿದರು. ಅಂದಿನಿಂದ ಇಂದಿನವರೆವಿಗೆ ಈ ಸಂಪ್ರದಾಯವು ಅವಿಚ್ಛಿನ್ನವಾಗಿ ನಡೆದುಕೊಂಡು ಬಂದು ಶ್ರೀ ಶ್ರೀ ಶಿವಕುಮಾರಮಹಾಸ್ವಾಮಿಗಳವರ ದಿವ್ಯ ದೃಷ್ಟಿಯಿಂದಾಗಿ ಹೊಸ ಹೊಸ ಆಕರ್ಷಣೆಗಳನ್ನೊಳಗೊಂಡು ಚಿರ ನೂತನವಾಗಿ ಬೆಳೆದು ಬರುತ್ತಿದೆ.

ಜಾತ್ರಾ ಸಮಯದಲ್ಲಿ ದಾಸೋಹ

'ಹೊತ್ತಿಸಿದ ಬೆಂಕಿ ಆರದಿರಲಿ' ಎಂಬ ಈ ಜನ ಜನಿತವಾದ ನಾಣ್ನುಡಿ ಶ್ರೀ ಮಠದ ದಾಸೋಹದ ಹಿರಿಮೆಗರಿಮೆಗಳನ್ನು ಸಾರುತ್ತದೆ. ಮಹಾಶಿವರಾತ್ರಿ ಸಮಯದಲ್ಲಿ 10–15 ದಿನಗಳ ಪರ್ಯಂತರವೂ ನಡೆಯುವ ಜಾತ್ರೆಗೆ ಬರುವ ಅಗಣಿತ ಜನಸಂದೋಹಕ್ಕೆ ಅಹರ್ನಿಶಿ ಉಚಿತ ಊಟದ ವ್ಯವಸ್ಥೆಯಿರುತ್ತದೆ. ಯಾವ ಹೊತ್ತಿನಲ್ಲಿ ಎಷ್ಟೇ ಮಂದಿ ಬರಲಿ, ಯಾರೇ ಬರಲಿ ಎಲ್ಲರಿಗೂ ಪ್ರಸಾದ ನೀಡಿಕೆಯುಂಟು. ಪ್ರಸಾದದ ವಿಶೇಷ ವ್ಯವಸ್ಥೆಗಾಗಿ ಜಾತ್ರೆಕಾಲದಲ್ಲಿ 6–7 ಕೊಪ್ಪಲುಗಳನ್ನು ತೆರೆಯಲಾಗುವುದು. ಆ ಎಲ್ಲಾ ಕೊಪ್ಪಲುಗಳಿಗೆ ಎಲ್ಲ ಕಡೆಯಲ್ಲೂ ತೆರೆದ ಹೆಬ್ಬಾಗಿಲುಗಳಿರುತ್ತವೆ. ಅಲ್ಲಿ ದಿನ ಒಂದಕ್ಕೆ ನೂರು ಪಲ್ಲ ಪಡಿಪದಾರ್ಥಗಳು ದೊಡ್ಡ ದೊಡ್ಡ ಪರಿಪರಡಿಗಳಲ್ಲಿ ಬೆಂದು ಪ್ರಸಾದವಾಗುತ್ತದೆ- ದಿವಸಕ್ಕೆ 50–60 ಸಾವಿರದಂತೆ ಜಾತ್ರಾಪೂರ್ತ

ಸುಮಾರು 5–6 ಲಕ್ಷದಷ್ಟು ಮಂದಿ ತೃಪ್ತಿಕರವಾದ ಪ್ರಸಾದವನ್ನು ಸ್ವೀಕರಿಸಿ ಪ್ರಸಾದ ಪರಿಣಾಮಿಗಳಾಗುತ್ತಾರೆ. ವರ್ಷವಿಡೀ ಒಪ್ಪೊತ್ತಿನ ಊಟ ತಿಂದ ಅಥವಾ ಎರಡುಹೊತ್ತೂ ಅರೆಹೊಟ್ಟೆ ಉಂಡ ಅದೆಷ್ಟೋ ಮಂದಿ ಬಡಬಗ್ಗರು ಹೊಟ್ಟೆತುಂಬಾ ಉಂಡು ತೃಪ್ತಿಪಟ್ಟು ಊರುಗಳಿಗೆ ತೆರಳುತ್ತಾರೆ. ಜಾತ್ರೆಯಲ್ಲಿ ಪ್ರಸಾದ ಸಿದ್ಧಗೊಳಿಸುವುದಕ್ಕಾಗಿ ಸುಮಾರು 200–300 ಪಲ್ಲದಷ್ಟು ರಾಗಿ ನೂರಾರು ಗಾಡಿ ಸೌದೆ ಸಾಂಬಾರು ಪದಾರ್ಥ ತರಕಾರಿ ಬೇಕಾಗುತ್ತದೆ.

ಶ್ರೀಗಳ ಸಾಹಸ

ಇಂತಹ ಕಾಲದಲ್ಲಿ ಈ ಬೃಹದ್ದಾಸೋಹಕ್ಕೆ ಬೇಕಾಗುವ ಪಡಿಪದಾರ್ಥಗಳು ಕಡ್ಡಿಕಾಳುಗಳು, ಸೌದೆಸೊಪ್ಪುಗಳು ಬಂದೊದಗುವುದು ಚೋದ್ಯವೇ ಸರಿ. ಶ್ರೀಮಂತವಲ್ಲದ ಶ್ರೀ ಮಠ ಇದನ್ನು ಹೇಗೆ ನಿಭಾಯಿಸುತ್ತದೆಂಬುದು ಹೇಳ ಬರದು. ಶ್ರೀ ಮಠವೊಂದು ಅಕ್ಷಯ ಪಾತ್ರೆಯಿದ್ದಂತೆ ಬರುತ್ತದೆ, ಬರಿದಾಗುತ್ತದೆ. ಮತ್ತೆ ತುಂಬುತ್ತದೆ. ಆ ಅಕ್ಷಯ ಪಾತ್ರೆ ತುಂಬುವುದು ನಾನಾ ರೀತಿ. ಹಳ್ಳಿನಾಡಿನಲ್ಲಿ ನಮ್ಮ ಮುಗ್ಧ ರೈತ ಬಾಂಧವರು ತಾವು ಬೆಳೆದ ಬೆಳೆಸಿನಲ್ಲಿ ಇಂತಿಷ್ಟು ಭಾಗವೆಂಬುದಾಗಿ ಈ ಮಠಕ್ಕೆ ಮೀಸಲು ತೆಗೆದುಬಿಡುತ್ತಾರೆ. ಅದನ್ನು ತಾವು ಜಾತ್ರೆಗೆ ಬರುವಾಗ ತಲೆಯಲ್ಲಿಹೊತ್ತೋ ಅಥವಾ ಗಾಡಿಯಲ್ಲಿ ಹೇರಿಕೊಂಡೋ ಬಂದು ಸನ್ನಿಧಿಗೆ ಒಪ್ಪಿಸಿ ಕೃತಾರ್ಥರಾಗುತ್ತಾರೆ. ಇನ್ನು ಕೆಲಭಾಗ ಭಿಕ್ಷಾಟನೆಯಿಂದ ಭರ್ತಿಯಾಗುತ್ತದೆ. ಇಂದಿನ ದಿನಗಳಲ್ಲಿ ದವಸ ಧಾನ್ಯಗಳನ್ನು ಹೊಂಚುವುದಕ್ಕಿಂತಲೂ ಸೌದೆ ಮತ್ತು ಊಟದೆಲೆಗಳನ್ನು ಹೊಂದಿಸುವುದು ದುಷ್ಕರವಾಗಿದೆ. ಜಾತ್ರೆಯಲ್ಲಿ ಕೊಪ್ಪಲುಗಳಿಗೆ ಸಾವಿರಾರು ಗಾಡಿಗಳಷ್ಟು ಸೌದೆ ಬೇಕಾಗುವುದು. ಎಪ್ಪತ್ತು ತುಂಬಿದ ತುಂಬು ಬಾಳಿನ ಪೂರ್ಣಾನಂದರಾದ ಶ್ರೀ ಶ್ರೀ ಗಳವರೇ ಉರಿಬಿಸಿಲಿನಲ್ಲಿ ಬೆಟ್ಟದ ನೆತ್ತಿಯನ್ನೇರಿ ಹುಡುಗರ ಸಂಗಡ ಸೌದೆಯನ್ನು ಸಾಗಿಸುತ್ತಾರೆ. ಈ ಬಾರಿ ಜಾತ್ರೆಯು ನಿರೀಕ್ಷಿತ ಮೊದಲೇ ಬಂದುದರಿಂದ ಸಕಾಲಕ್ಕೆ ಸೌದೆಯನ್ನು ಹೊಂದಿಸುವುದು ದುಸ್ತರವಾಯಿತು. ಆದರೂ ಧೈರ್ಯಗೆಡದೆ ಶ್ರೀಗಳು ಮಹಾಶಿವರಾತ್ರಿಯಂದು ರಾತ್ರಿ ದೇವರಾಯನ ದುರ್ಗದ ವನಪ್ರದೇಶದಲ್ಲಿ ಸೌದೆಗಾಗಿ ಹೋಗಿ ಜಾಗರಣೆ ಮಾಡಿದರು.

ಶ್ರೀ ಶ್ರೀಗಳವರ ಲೋಕಬಾಂಧವ್ಯ :

ಜಾತ್ರೆಯ ಸಮಯದಲ್ಲಿ ದಾಸೋಹಂ ಭಾವಿಯಾದ ಶ್ರೀ ಶ್ರೀ ಗಳವರು ತಮ್ಮ ಹೆಚ್ಚು ಸಮಯವನ್ನು ದಾಸೋಹದ ಕ್ರಿಯೆ ಮತ್ತು ಬಂದ ಜನರಿಗೆ ದರ್ಶನಾಶೀರ್ವಾದವನ್ನು ನೀಡುವುದರಲ್ಲಿ ವಿನಿಯೋಗಿಸುತ್ತಾರೆ. ಪ್ರತಿಕ್ಷಣವೂ ಕೊಪ್ಪಲಿನಿಂದ ಕೊಪ್ಪಲಿಗೆ ಮಿಂಚಿನ ವೇಗದಲ್ಲಿ ತಿರುಗಾಡುತ್ತಾ ಮೇಲ್ವಿಚಾರಣೆ ನೋಡುತ್ತಾರೆ. ಪ್ರಸಾದ ನಿಲಯಗಳಿಗೆ ಮುಕ್ತಮಹಾದ್ವಾರಗಳಿಂದ ಊಟಕ್ಕೆ ಬರುವ ಅಪಾರ ಜನಸಂದೋಹವನ್ನು ಕಂಡು ಶ್ರೀ ಶ್ರೀ ಗಳವರಿಗೆ ಭಾರಿ ಸಂತೋಷ ಉಂಟಾಗುತ್ತದೆ. ಜನ ಕಡಿಮೆ ಸಂಖ್ಯೆಯಲ್ಲಿ ಬಂದಾಗ ಅವರ ಮನನೊಂದು ನುಡಿಯುತ್ತದೆ. ‘ಕೊಪ್ಪಲಿಗೆ ಬರುವುದಕ್ಕೆ ಬೇಜಾರಾಗುತ್ತದೆ’ ಎಂಬುದಾಗಿ. ಪ್ರಸಾದ ಸಾಲದೆ ಹೋದಾಗ ಶ್ರೀ ಶ್ರೀ ಗಳವರೇ ಖುದ್ದಾಗಿ ನಿಂತು ಮಾಡಿಸುತ್ತಾರೆ, ಮಾಡುತ್ತಾರೆ. ಬಡಿಸಿಸುತ್ತಾರೆ. ಅವರ ಗುರುಗಳ ಆಶೀರ್ವಾದದ ಬಲದಿಂದಲೋ, ಅಥವಾ ಕ್ರತುಶಕ್ತಿಯಿಂದಲೋ ಏನೋ ಅವರು ಕೊಪ್ಪಲಲ್ಲಿ ಕ್ಷಣಕಾಲ ನಿಂತರೆಸಾಕು ಪದಾರ್ಥ ಬೆಂದು ಪ್ರಸಾದ ಸಿದ್ಧವಾಗುತ್ತದೆ. ಬಡವ ಬಲ್ಲಿಗರೆನ್ನದೆ, ಪಟ್ಟಣಿಗ ಹಳ್ಳಿಗರೆನ್ನದೆ ಎಲ್ಲರನ್ನೂ ಸಮತಾ ಭಾವದಿಂದ, ಮಮತೆಯಿಂದ ‘ಊಟ ಮಾಡಿದಿರಾ ?’ ಎಂದು ವಿಚಾರಿಸುತ್ತಾರೆ. ಶ್ರೀ ಶ್ರೀ ಗಳವರು ನುಡಿಸಿಸುದುದರಿಂದ, ಅವರ ದರ್ಶನ ಮಾತ್ರದಿಂದ, ಕೃತ ಆಶೀರ್ವಾದದಿಂದ, ಜಾತ್ರೆಗೆ ಬಂದ ಯಾತ್ರಾರ್ಥಿಗಳು ಧನ್ಯತೆಯಯಿಂದ ಪ್ರಸಾದ ಸ್ವೀಕರಿಸಿ ಊರುಗಳಿಗೆ ತೆರಳುತ್ತಾರೆ. ಶ್ರೀ ಶ್ರೀ ಗಳವರ ಈ ಲೋಕ ಬಾಂಧವ್ಯದ ಸುಗ್ಗಿಯನ್ನು ಕಂಡ ಎಲ್ಲರ ಮನಗಳು ಹಿಗ್ಗುತ್ತವೆ.

ಅತಿ ದೊಡ್ಡ ದನಗಳ ಜಾತ್ರೆ :-

ಸರ್ವೇಸಾಮಾನ್ಯವಾಗಿ ಎಲ್ಲಾ ಜಾತ್ರೆಗಳಿಗಿಂತಲೂ ಹೆಚ್ಚು ಸಹಸ್ರ ಸಂಖ್ಯೆಯಲ್ಲಿ ಜಾನುವಾರುಗಳು ಈ ಜಾತ್ರೆಯಲ್ಲಿ ಕಲೆಯುತ್ತವೆ. ಪ್ರತಿ ವರ್ಷವೂ ಸು. 20–30 ಸಾವಿರ ದನಗಳು ಸೇರುತ್ತವೆ. ಕೊಡು–ಕೊಳ್ಳ ವ್ಯಾಪಾರವೂ ದುರಂಧುರಿಯಾಗಿ ನಡೆಯುತ್ತದೆ.

ಉತ್ಸವಗಳು :

ಜಾತ್ರೆಯ ಅಂಗವಾಗಿ ಪ್ರತಿ ದಿನವು 2–3 ಉತ್ಸವಗಳು ನಡೆಯುತ್ತವೆ. ಇವುಗಳಲ್ಲಿ ರಥೋತ್ಸವ ಮತ್ತು ಬೆಳ್ಳಿಪಾಲಕಿ ಉತ್ಸವಗಳು ವಿಜೃಂಭಣೆಯಿಂದ ನಡೆಯುತ್ತವೆ. ಅಂದು ಎಂದಿಗಿಂತ ಹೆಚ್ಚಾಗಿ ನೂರಾರು ಮೈಲಿಗಳಿಂದ ಭಕ್ತ ಪ್ರವಾಹ ಹರಿದು ಬರುತ್ತದೆ. ಎಲ್ಲರೂ ಶ್ರೀ ಸ್ವಾಮಿ ದರ್ಶನದಿಂದ ಪುನೀತರಾಗುತ್ತಾರೆ. ಮದ್ದು ಬಾಣಬಿರುಸುಗಳಿಂದಲೂ ಧ್ವಜ ಕುಣಿತ ಜಾನಪದ ಕುಣಿತಗಳಿಂದಲೂ, ವಿವಿಧ ವಾದ್ಯ ವಿಶೇಷಗಳಿಂದಲೂ, ಆ ಉತ್ಸವಕಾಲ ಬಂದ ಭಕ್ತರ ಮನಸ್ಸಿನಲ್ಲಿ ಭುವಿಗಿಳಿದ ಸ್ವರ್ಗದ ಕಲ್ಪನೆಯನ್ನು ಮೂಡಿಸುತ್ತದೆ.

ಇದರ ಜೊತೆಗೆ ಜ್ಞಾನ ದಾಸೋಹಕ್ಕಾಗಿ ಶ್ರೀ ಶ್ರೀ ಗಳವರು ವಸ್ತು ಪ್ರದರ್ಶನವನ್ನೂ ಏರ್ಪಡಿಸಿರುತ್ತಾರೆ.

ಇದು ದಾಸೋಹ ಭೂಮಿ. ಇಲ್ಲಿ ಜಾತ್ರೆಯ ಕಾಲದಲ್ಲಿ ನಡೆಯುವಂಥ ದಾಸೋಹ ಎಲ್ಲೂ ನಡೆಯದು. ಈ ಧರೆಯನ್ನು ಮೆಟ್ಟಿದಂತಹ ತಪೋಧನರು ಮಹಾಮಹಿಮರು, ದಾಸೋಹಂಭಾವಿಗಳು. ಸಾಂಪ್ರತ ಶ್ರೀ ಶ್ರೀ ಮಹಾಸ್ವಾಮಿಗಳವರ ಕ್ರತುಶಕ್ತಿ, ಕ್ರಿಯಾಸಿದ್ಧಿಗಳು ಅಮೇಯ, ಅಗೋಚರವಾದವುಗಳು.

‘ಭಿಕ್ಷೆ ಹೊರಟಿದೆ ಜಂಗಮದ ಜೋಳಿಗೆ
ಲಕ್ಷ ಜನಗಳ ಪೊರೆದಿದೆ ಜಗದೊಳಗೆ’

ಮಹಾತ್ಮರ ನೆನಪುಗಳು–೧ ಅಮೂಲ್ಯ ನಿಧಿ

ಗಾಂಧೀಜಿಯವರು ಲಂಡನ್ ಮ್ಯಾಟ್ರಿಕ್ಯುಲೇಷನ್‌ಗೆ ಕುಳಿತಿದ್ದಾಗ ಅವರಿಗೆ, “ ಬಂಗಾರಕ್ಕಿಂತ ಅಮೂಲ್ಯ ನಿಧಿಯಾವುದು” ? ಎಂಬ ಪ್ರಶ್ನೆ ಬಂದಿತು. ಅದಕ್ಕೆ ಅವರು ಉತ್ತರಿಸಿದರು. “ ಸತ್ಯ ” ! 1930 ರಲ್ಲಿ ಗಾಂಧೀಜಿ ದುಂಡುಮೇಜಿನ ಪರಿಷತ್ತಿಗೆ ಹೊರಟಾಗ ಮಾರ್ಸೆಲ್ಸ್‌ನಲ್ಲಿ ಕೆಲ ವಿದ್ಯಾರ್ಥಿಗಳನ್ನುದ್ದೇಶಿಸಿ ಒಂದು ಉಪನ್ಯಾಸವಿತ್ತರು. ಲಂಡನಿನ ಡೇಲಿ ಮೇಲ್ ಪತ್ರಿಕೆ ಆ ಭಾಷಣಲ್ಲಿ ಅಪಾರ್ಥಗಳನ್ನು ಸೇರಿಸಿ ವರದಿ ಮಾಡಿತು. ಅದನ್ನು ಓದಿ ಗಾಂಧೀಜಿ ಕಿಡಿ ಕಿಡಿಯಾದರು. ಅವರು ಆ ಪತ್ರಿಕೆಯ ಬಾತ್ಮೀದಾರರನ್ನು ಪತ್ತೆ ಮಾಡಿ, “ನಾನು ಆಂಗ್ಲ ಸರಕಾರದ ಮೇಲೆ ದ್ವೇಷ ಪ್ರಚಾರ ಮಾಡಿ, ಭಾಷಣವಿತ್ತುದಾಗಿ ಪತ್ರಿಕೆಯಲ್ಲಿ ಬರೆದಿದ್ದೀರಿ. ಸರಕಾರದ ವಿರುದ್ಧವಿರುವ ಯಾವ ಮಾತನಾದ್ನರೂ ನನ್ನ ಭಾಷಣದಲ್ಲಿ ತೋರಿಸಿ ಕೊಡಿ” ಎಂದು ಜೋರು ಮಾಡಿದರು. ಬಾತ್ಮೀದಾರ ತಬ್ಬಿಬ್ಬಾದ. ಆಗ ಗಾಂಧೀಜಿಯೇ ಮುಂದುವರೆದು, “ರಾಜಕೀಯವನ್ನು ನನ್ನ ಬಾಳಿನ ಇತರ ಪ್ರಾಮುಖ್ಯ ಸಂಗತಿಗಳಿಂದ ಪ್ರತ್ಯೇಕಿಸಲು ಅಸಾಧ್ಯ; ಯಾಕೆಂದರೆ ನನ್ನ ರಾಜಕೀಯ ಹೊಲಸಲ್ಲ. ಅಂತ್ಯ ಸತ್ಯ ಅಹಿಂಸೆಗಳೊಡನೆ ಪೂರ್ಣ ಲೀನವಾಗಿದೆ. ಭಾರತ ನಾಶವಾದರೂ ಚಿಂತೆಯಿಲ್ಲ. ಸತ್ಯವನ್ನು ಬಲಿಕೊಟ್ಟು ಹೊರಡುವ ಸ್ವರಾಜ್ಯ ನನಗೆ ಬೇಕಿಲ್ಲ” ಎಂದರು ಕಟುವಾಗಿ..

— ಪ. ರಾಮಕೃಷ್ಣ ಶಾಸ್ತ್ರಿ.

ಭೃಂಗದ ಬೆನ್ನೇರಿ ಬಂತು ಕಲ್ಪನಾ ವಿಲಾಸ

— ಜಯಸುದರ್ಶನ

ಕವಿಯು ಬರೆವಣಿಗೆಯನ್ನು ಕೈಗೊಳ್ಳುವುದು ವಾಸ್ತವ ಲೋಕದಿಂದ ಪಾರಾಗಿ, ಕಲ್ಪನಾ ಲೋಕದಲ್ಲಿ ವಿಹರಿಸುವುದಕ್ಕಾಗಲ್ಲ; ವಾಸ್ತವವನ್ನು ಇನ್ನಷ್ಟು ಪ್ರಜ್ಞಾಪೂರ್ವಕವಾಗಿ ಕಾಣಲು ಅತ ಪ್ರಯತ್ನಿಸುತ್ತಾನೆ. ಕವನಕ್ಕೆ ಅದರ ಹುಟ್ಟಿನಹೊರತು ಬೇರಿನ್ನಾವ ಹೇತುವನ್ನೂ ಬರೆಯುವಾಗ–ಕವಿಕಂಡಿರಿಸುವುದಿಲ್ಲ. ನಮ್ಮ ವಿಸ್ಮಯಕರವೂ, ನಿಗೂಢವೂ, ದುರಂತಮಯವೂ, ಚೈತನ್ಯದಾಯಿಯೂ ಆದ ಬದುಕಿನ ಕಾಣ್ಕೆ ಕವಿಯು ಬರಹದಲ್ಲಿರುತ್ತದೆ–ಎನ್ನುವ ಲೇಖಕರು ಅಮೇರಿಕೆಯಿಂದ ಹಾಗೂ ಯೂರೋಪಿನ ಇನ್ನೆರಡು ರಾಜಧಾನಿಗಳಿಂದ ಪ್ರಕಟವಾಗುವ ಅಂತರ ರಾಷ್ಟ್ರೀಯ ದೈನಿಕ " ದಿ ಕ್ರಿಶ್ಚಿಯನ್ ಸೈನ್ಸ್ ಮಾನೀಟರ್ " ಪತ್ರಿಕೆಗೆ ವಿಶೇಷವಾಗಿ ಬರೆದ ಇಂಗ್ಲೀಷ್ ಲೇಖನ " ದಿ ಪರ್ಪಸ್ ಆಫ್ ಪೊಯೆಟ್ರಿ " ಎಂಬ ಲೇಖನದ ತುಸು ಸಂಗ್ರಹ ರೂಪಾಂತರ ಇಲ್ಲಿದೆ.

ಕವಿ ಯಾಕೆ ಬರೆಯುತ್ತಾನೆ? ಕಾವ್ಯ ಹೇತು, ಗುರಿಗಳೇನು ? ಇತ್ಯಾದಿ ಪ್ರಶ್ನೆಗಳನ್ನು ನನಗೆ ಆಗಾಗ ಹಾಕಲಾಗುತ್ತದೆ. ಸಾಮಾನ್ಯವಾಗಿ ಹೀಗೆ ಪ್ರಯತ್ನಿಸುವವರು ನನ್ನ ಮಿತ್ರರು; ಈ ಮಿತ್ರರಲ್ಲಿ ಅನೇಕರು ಕವನವನ್ನು ಓದಿ ಸಂತೋಷ ಪಡಬಲ್ಲರು; ಆದರೆ ಇವರೆಲ್ಲ ಬದುಕಿನಲ್ಲಿ ಕಾವ್ಯದ ಪಾತ್ರವನ್ನು ಕುರಿತು ವಿಸ್ಮಯವನ್ನು ಮಾತ್ರ ವ್ಯಕ್ತಪಡಿಸಬಲ್ಲರು. ಮತ್ತು ಕವಿಯೆಂಬ ತಮ್ಮ ಸ್ನೇಹಿತನು ಕವನ ಬರೆಯುವ 'ವೈಚಿತ್ರ್ಯದ' ಬಗ್ಗೆ ಅವರಿಗೆ ಕೆಲವು ವೇಳೆ ಹೆಮ್ಮೆಯಾಗುತ್ತದೆ; ಆದರೆ ಅನೇಕ ವೇಳೆ ಅವರಿಗೆ 'ಕವಿ'ಯ ಮನೋಧರ್ಮ ಅರ್ಥವಾಗದು.

ಹಾಗೆ ನೋಡಿದರೆ, ಕವಿಯೊಬ್ಬ ಯಾಕೆ ಬರೆಯ ಬಯಸುತ್ತಾನೆ ? ಪ್ರಾಯಶಃ ಈ ಬರೆಯುವ ಬಯಕೆ ಆತ ಬರೆಯಲು ಪ್ರಾರಂಭಿಸಿದ ಮೇಲೆಯೇ ತೀವ್ರವಾಗುತ್ತದೆಂದು ತೋರುತ್ತದೆ. ಆದರೆ ಮೂಲತಃ ಬರೆಯಬೇಕು ಯಾಕೆ ? ನನ್ನಮಟ್ಟಿಗೆ ಹೇಳುವುದಾದರೆ ನಾನು ಬರೆಯುತ್ತೇನೆ—ಯಾಕೆಂದರೆ ನಾನಿನ್ನೇನೂ ಮಾಡಲಾರೆ. ಅಂದರೆ ನಾನು ಮೋಡಗಳ ಆಟವನ್ನು ನೋಡಿದಾಗ, ಆಕಾಶ ತನ್ನೆಲ್ಲ ವೈಶಾಲ್ಯದಲ್ಲಿ ನಗುವಾಗ ನನ್ನ ಜನ ತಮ್ಮ ಸುಖ-ದುಃಖ–ಸಂತೋಷಗಳಲ್ಲಿ ಅನುಭವಗಳನ್ನು ಪಡೆಯುವುದನ್ನು ಅವರಲ್ಲಿ ಒಬ್ಬನಾಗಿ ವೀಕ್ಷಿಸಿದಾಗ ಮತ್ತು ನಾಗರಿಕತೆಯೆಂಬ ಈ ಅನುಪಮದ ಮೆರವಣಿಗೆ ತುಸು ಸಂದಿಗ್ಧದಲ್ಲೆ ಆದರೆ ಅಪಾರ ಧೈರ್ಯದಿಂದ ಅಪರಿಚಿತ ಭವಿಷ್ಯತ್ತಿನತ್ತ ಸಾಗುತ್ತಿರುವಾಗ-ನನಗೆ ಕವನದ ಬರವಣಿಗೆ, ಇವುಗಳ ಬಗ್ಗೆ ನನ್ನ ಅನಿಸಿಕೆಗಳನ್ನು ವ್ಯಕ್ತಗೊಳಿಸಲು ಸೂಕ್ತ ಅವಕಾಶ ಒದಗಿಸುತ್ತದೆ. ಒಬ್ಬ ಕವಿ ಬರೆಯುತ್ತಾನೆ–ಯಾಕೆಂದರೆ ಆತ ಮೂಲತಃ ಬರೆಯಲು (ಅದರ ಇತರ ಉದ್ದೇಶಗಳ ಪರಿವೆ ಅವನಿಗಿಲ್ಲ) ಇಚ್ಛಿಸುತ್ತಾನೆ! ಮತ್ತು ಅನಂತರ ತಾನು ಬರೆದುದನ್ನು ಓದಲು ಓದುಗರು ಇದ್ದಾರೆ ಎಂಬ ಕಾರಣದಿಂದ ಬರವಣಿಗೆ ಮುಂದುವರಿಸುತ್ತಾನೆ.

ಈ 'ಬರೆಯಬೇಕೆನ್ನುವ ಬಯಕೆಯು' ನಾವು ಯಾವುದನ್ನು ಸ್ವ–ಅಭಿವ್ಯಕ್ತಿ ಎಂದು ಕರೆಯುತ್ತೀವೆಯೋ ಅದಕ್ಕಿಂತ ಬೇರೆಯಾಗಿದೆ ಅನಿಸುತ್ತದೆ. ಸ್ವ-ಅಭಿವ್ಯಕ್ತಿ ಬರೆದ ಅನಂತರ ಹೊಳೆಯುವ ಒಂದು ಸ್ಥಿತಿ. ಆದರೆ ಅದು ಮೂಲತಃ ಬರೆವಣಿಗೆಗೆ ಏಕೈಕವಾದ ಪ್ರಚೋದಕ ಶಕ್ತಿಯಾಗಿರುವ ಪ್ರಸಂಗಗಳು ವಿರಳ ಕವನ ತನ್ನ ಮೂಲಕ ವಿಮೋಚನೆಯನ್ನು ಅಪೇಕ್ಷಿಸುತ್ತದೆಂಬ ಕಾರಣದಿಂದ ಕವಿ ಬರೆಯುತ್ತಾನೆ. ಬರೆದಾಗ ವಿಮೋಚನೆ ಸಿಗುವುದು ಕವನಕ್ಕೆ, ಕವಿಗಲ್ಲ. ಕವನದ ಬರೆವಣಿಗೆಯಿಂದ ತನ್ನ ಮೇಲಿನ ಹೊರೆ ಇಳಿಯುತ್ತದೆ ಎಂಬ ಕಾರಣದಿಂದ ಕವಿಗೆ ತಾನಾಗಿ ಸಂತೋಷವಾಗುತ್ತದೆ. ಬರೆವಣಿಗೆಯ ಅನಂತರ 'ಕಾದಿರಿಸುವ' ಹೊಣೆ ಕವಿಯ ಪಾಲಿಗೆ ಮುಗಿಯಿತು ! ಈಗ ಕವನ ಎಲ್ಲರಿಗೆ ಸೇರಿದ ಸಂಪದವಾಗುತ್ತದೆ.

ಕಾವ್ಯ ಒಂದು ನೂತನ ಸೃಷ್ಟಿ, ರಚನೆ ಎನ್ನುವುದಕ್ಕಿಂತ ಹೆಚ್ಚಾಗಿ ಸಂಶೋಧನೆ, ಕಾಣ್ಕೆ ಆಗಿದೆ. ಮಕ್ಕಳ ಹೊಳೆವ ಮುಖಗಳ ಮೇಲೆ ಅದು ಕುಣಿಯುತ್ತಿರುತ್ತದೆ. ತಮ್ಮಬಣ್ಣಗಳನ್ನು ಬೆಳಕಿನ ಸಂಗೀತಕ್ಕೆ ಶೃತಿಯಿಡವ ಹೂವುಗಳಲ್ಲಿ, ಕಾಮನ ಬಿಲ್ಲಿನ ಹಗಲುಗನಸಿನಲ್ಲಿ, ಕಣ್ಣಂಚಿನಲ್ಲಿ ಹೊಳೆವ ಹನಿಯಲ್ಲಿ ಮತ್ತು ದುಂಬಿಗಾಳಿಯಲ್ಲಿ ಕೊರೆಯುವ ಶಬ್ದದ ದಾರಿಯಲ್ಲಿ ಕವನ ಇಣುಕುತ್ತಿರುತ್ತದೆ. ಹಾಗೆ ನೋಡಿದರೆ ಕವನವಿಲ್ಲದ ತಾಣವಿಲ್ಲ. ಅದನ್ನು ಕಾಣುವ ಕಣ್ಣು ಬೇಕು, ಅಷ್ಟೇ. ನಾನು ಇದನ್ನು ಬರೆಯುವಾಗ ಕಾವ್ಯ "ಪರವಶ" ನಾಗುತ್ತಿಲ್ಲ. ಇದ್ದುದನ್ನು ಇದ್ದಂತೆ ಹೇಳಲು ಬಳಸಿರದ, ಗದ್ಯದ ಶೈಲಿಯನ್ನು ಬಳಸುತ್ತಿದ್ದೇನೆ. ಕವನ ಬರೆಯುವ ಕೆಲಸವು ಕವನ ಬರೆಯುವುದು ಹೇಗೆ ಎಂಬುದಕ್ಕಿಂತ ಬಿನ್ನ. ಇದು ಬೇರೆ ಮಾತು. ಹೀಗೆ ಎಲ್ಲೆಲ್ಲೂ ಇರುವ ಕವನವನ್ನು ಕವಿ ಅನಾವರಣಗೊಳಿಸಿ, ಅದರ ಸತ್ವವನ್ನು ಶಬ್ದಗಳಲ್ಲಿ ಹಿಡಿದಿಡಲು ಯತ್ನಿಸುತ್ತಾನೆ ನೀವು ಕವನದಲ್ಲಿನ ಶಬ್ದಗಳನ್ನು ಗಮನವಿಟ್ಟು ಓದಿದರೆ ಶಬ್ದಗಳು ಮರೆಯಾಗಿ, ಕೇವಲ ಕವನ, ತನ್ನೆಲ್ಲ ವೈಭವ ಹಾಗೂ ಸರಳ ಸ್ವರೂಪದಲ್ಲಿ ನಿಮ್ಮೆದುರು ನಿಲ್ಲುತ್ತದೆ.

ಆದ್ದರಿಂದ ಕವಿ ಬರೆಯುತ್ತಾನೆ–ಮತ್ತು ಅವನು ಬರೆಯುವ ಮುಂಚೆ ಅದು ಇದೆ. ಭಾರತದ ಜೀವಂತವಾಗಿರುವ ಅತ್ಯಂತ ಪ್ರಮುಖ ಕವಿಗಳಲ್ಲಿ ಒಬ್ಬರಾದ ಡಾ. ದ. ರಾ. ಬೇಂದ್ರೆ ಅವರು ತಮ್ಮ "ಭಾವಗೀತ" ದಲ್ಲಿ ಕವನವನ್ನು ಅರ್ಥವಿದಲ್ಲ, ಸ್ವಾರ್ಥವಿಲ್ಲದ ಅಸ್ತಿತ್ವವೆಂದು ಸೂಚಿಸಿದ್ದಾರೆ. ಅಂದರೆ ಕವನ ಉದ್ದೇಶ ರಹಿತ ಕೂಡ. ಅದು ಎಲ್ಲ ಸಂಕುಚಿತ ಅರ್ಥಗಳ ಹಾಗೂ ಉದ್ದೇಶಗಳ ಆಚೆ ನಿಲ್ಲುತ್ತದೆ. ಎಂತಲೇ ಮನುಷ್ಯ ವಿಶ್ವ ಸಂಪನ್ನತೆಯ ಎದುರು ಒಂಟಿಯಾಗಿ ನಿಂತಾಗ ಅನುಭವಿಸುವ ಲೋಕೋತ್ತರವಾದ ಒಂದು ಏಕೋಭಾವದ ಹಾಗೆ ಕವನವನ್ನು ಎಲ್ಲರೂ ತಮ್ಮ ತಮ್ಮ ಕಂಡರಿಕೆಯಮಟ್ಟಿಗೆ ಅನುಬವಿಸಬಲ್ಲರು. ಕವನವನ್ನು ,ಅನುಭವಿಸುವುದು' ವಿಶ್ವ ಚೇತನದ ಅಸ್ತಿತ್ವವನ್ನು ಅನುಭವಿಸುವುದು ಹೇಗೆ ಪ್ರತಿಯೊಬ್ಬರ ಸಾಮರ್ಥ್ಯವನ್ನು ಅವಲಂಬಿಸಿದೆಯೋ ಹಾಗೆ-ಅವರವರ ಚೈತನ್ಯವನ್ನು ಅವಲಂಬಿಸಿದೆ. ನಿಜವಾದ ಕವನ ಓದುಗನಿಗೆ ಸಂಶೋಧನೆಯ, ಅನಾವರಣದ, ಅನ್ವೇಷಣೆಯ ಚೊಕ್ಕನಾದ, ವಿನೂತನವಾದ ಸುಖವನ್ನು ಕೊಡುತ್ತದೆ. ಮತ್ತು ಆತನ ಮುಂದೆ ಬದುಕಿನ ಹೊಸ ಕ್ಷಿತಿಜಗಳನ್ನು ತೆರೆಯುತ್ತದೆ. ಆಗ ಓದುಗನ ಆನಂದ ಬರೆಯುವನ ಆನಂದಕ್ಕೆ "ಕಿಂಚಿದೂನ"ವೂ ಆಗಿರದು. ಹೀಗಾಗಿ, ಒಬ್ಬ ಕವಿ ಕವಿತೆಯ ಸೃಷ್ಟಿಕರ್ತನೆಂದಾಗದೆ, ಹುಟ್ಟಿದ ಕವನವೇ ಕವಿಯನ್ನು ಕೂಡ ಸೃಷ್ಟಿಸುವಂತೆ ಆತ್ತದೆ. ಒಬ್ಬ ಕವಿಯ ಇರವೇ ಅವನ ಕವಿತೆ ಕೂಡ. ಒಬ್ಬ ವ್ಯಕ್ತಿಯಾಗಿ ಕವಿಯ ಅಭಿವ್ಯಕ್ತಿ ಕವನ ಮಾಧ್ಯಮದಲ್ಲಾಗುತ್ತದೆ. ಆದರೆ ಇದಕ್ಕೂ ಮತ್ತು ವ್ಯಕ್ತಿಪ್ರಧಾನವಾದ "ಸ್ವ-ಅಭಿವ್ಯಕ್ತಿ" ಗೂ ಯಾವ ಸಂಬಂಧ ಇರದು. ನಿಜವಾಗಿ ಒಬ್ಬ ಕವಿ ತನ್ನ ಅಭಿವ್ಯಕ್ತಿಯನ್ನು ಯಾವ ರೀತಿ ರೂಪಿಸಿಕೊಂಡಿರುತ್ತಾನೆಂದರೆ ಆತನ "ವ್ಯಕ್ತಿ" ಕವನದಲ್ಲಿ ತನ್ನನ್ನು ಕಂಡುಕೊಳ್ಳುವ ಪ್ರಯತ್ನ ಮಾಡುತ್ತದೆ. ಆದ್ದರಿಂದ ಕವನ ಈ "ವ್ಯಕ್ತಿ" ಯ ವಿಸ್ತರಣೆಯಾಗಿರದು.

ಕವನದಿಂದಲೇ ಕವಿಯ ಬಿಡುಗಡೆಯೂ ಆಗುತ್ತದೆ. ಇಂತಹ ಕವನವು ಬದುಕಿನ ವಿವಿಧ ಮುಖಗಳನ್ನು ಅನುಭವಿಸಲು ಸಾಧ್ಯವಾಗುವ ಹಾಗೆ ಓದುಗನನ್ನು ಅವನ ಪರಿಸರದ ವ್ಯಕ್ತಿತ್ವದ ಮಿತಿಗಳಿಂದ ಬಿಡುಗಡೆಗೊಳಿಸುತ್ತದೆ. ನಿಜವಾದ ಕವನ ಬುದ್ಧಿವಂತಿಕೆಯ, ಅಲ್ಪತನದ ಹಾಗೂ ಸೂಕ್ಷ್ಮತೆಯ ಅಭಾವದ ಮಿತಿಗಳಿಂದ ಓದುಗನನ್ನು ಪಾರುಮಾಡಿ ಆತನ ಬದುಕಿಗೆ ಹೊಸ ಸಾಧ್ಯತೆಗಳನ್ನು–ಆತನ ಗ್ರಹಿಕೆಯನ್ನು ಚುರುಕುಗೊಳಿಸಿ, ಅರಿವನ್ನು ವಿಸ್ತರಿಸಲು ನೆರವಾಗಬಲ್ಲ ಸಾಧ್ಯತೆಗಳನ್ನು-ತೆರೆಯುತ್ತದೆ. ಆದ್ದರಿಂದಲೇ ಕವಿಗೆ ಹಾಗೂ ಓದುಗನಿಗೆ ಕೂಡ ಕಾವ್ಯವು ಆತ್ಮಶೋಧನೆ ಆಗಿರಲು ಸಾಧ್ಯ. ಓದುಗನ ಹಾಗೂ ಕವಿಯ ನಡುವಣ ಅಂತರ ಈ ದೃಷ್ಟಿಯಿಂದ ತೀರ ಅಸ್ಪಷ್ಟವಾದದ್ದು. ಕವನವನ್ನು ಮೊದಲು "ಕಂಡರಿಸಿ" ಬರೆಯುವಾತ ಕವಿ; ಮತ್ತು ಆಮೇಲೆ ಮಾತ್ರ ಅದನ್ನು ಓದುಗ ಓದಬಲ್ಲ. ಆದರೆ ಈ ಅಂಶ ಕೇವಲ ತಾಂತ್ರಿಕವಾದದ್ದು.

ಹೀಗೆ ಕವಿಗೆ ಕಾವ್ಯವು ವಿಶ್ವದೊಂದಿಗೆ ಸಂಭಾಷಣೆಯ ಒಂದುಸಾಧನ; ಮತ್ತು ಅದೇ ಆತನ ಅಭಿವ್ಯಕ್ತಿ ಹಾಗೂ ವ್ಯಕ್ತಿತ್ವ. ಅದು ಸದಾ ಸಂಪರ್ಕಕ್ಕಾಗಿ ತವಕಿ

ಸುತ್ತಿಗುವ ಮನುಕುಲದ ಒಂದು ಸಂಪರ್ಕ ಸಾಧನವೂ ಹೌದ . ಆದ್ದರಿಂದ ಕವನದ ಮೇಲೆ ಹೊರಗಿನ ಯಾವುದೇ 'ಉದ್ದೇಶ' ವನ್ನು ಹೇರಿಸಲು ಆಗದು. ಕವನದ ಮೇಲೆ ಏನನ್ನೂ ಹೊರಿಸಲಾಗದು. ಅದು ಬರಿದೆ ಇರುತ್ತದೆ. ಪ್ರಾಯಶಃ ಕವನದ ಉದ್ದೇಶ ಅದರ ಇರುವಿಕೆಗಿಂತ ಬೇರೆಯಲ್ಲ. ಕವನ ಇದೆ; ಯಾಕೆಂದರೆ ವಿಶ್ವವಿದೆ ಮತ್ತು ಈ ಅವಕಾಶದಲ್ಲಿ ಕವಿ ಬದ ಕುತ್ತಾನೆ, ಬರೆಯುತ್ತಾನೆ ಎಂಬ ಕಾರಣದಿಂದ; ಓದುಗರು ಓದುತ್ತಾರೆ ಎಂಬ ಆನಂತರದ ಹೇತುವಿನ ಪ್ರಾಸಂಗಿಕವಾದ ಕಾರಣದಿಂದ. ಕವನ ನಿರ್ವಾತದಲ್ಲಿ ಬದುಕಲಾರದು ನಿಜ. ಅದು ಸತ್ಯಶೋಧನೆ (ಇಂದು "ಸತ್ಯ" ವೆಂಬುದು ಅತ್ಯಂತ ಶೋಷಿತವಾದ ಶಬ್ದವಾದ್ದರಿಂದ ತುಸು ಸಂಕೋಚದಿಂದಲೇ ಈ ಶಬ್ದ ಬಳಸುತ್ತಿದ್ದೇನೆ) ಯ ಒಂದು ಪ್ರಯತ್ನ ಕೂಡ; ನಮ್ಮ ಬದುಕಿನ ಹೂರಣದೊಡನೆ ಕವನದ ಮೂಲಕ ಸಂಪರ್ಕ ಸಾಧ್ಯ. ಆದರೆ ನಮ್ಮ ಬದುಕಿನಲ್ಲಿ ಕಾವ್ಯ ಎಷ್ಟರಮಟ್ಟಿಗೆ ಅಗತ್ಯ ಎಂಬುದು ನಮ್ಮ ಬದುಕಿನಲ್ಲಿ ಅದರ ಪಾತ್ರ ಕುರಿತು ಜನರ ತಿಳುವಳಿಕೆಯನ್ನು ಆಧರಿಸಿದೆ.

ಕವನ ಬರೆಯಲು ಅವಕಾಶವಿದೆ ಎಂಬ ಕಾರಣದಿಂದ ಕವಿ ಕವಿಯಾಗಿ ಬದುಕುತ್ತಾನೆ. ಆತ ಇರುವ ಕವನವನ್ನು ಬೆಳಕಿಗೆ ತರುತ್ತಾನೆ. ಶಬ್ದಗಳು ಕವಿಯ ಆಯ್ಕೆ ಎಂಬ ಮಟ್ಟಿಗೆ ಕವನ ಬರೆದವನದು. ಈ ರೀತಿ ಯಾಚೆ, ವಿಶಾಲ ಅರ್ಥದಲ್ಲಿ, ಕವನದ ಮೂಲಕ ಓದುಗ ತನ್ನದೇ ಆದ ಸ್ವತಂತ್ರ ಸಂಶೋಧನೆಯನ್ನು, ಪ್ರಯೋಗಗಳನ್ನು ನಡೆಸಲು ಮತ್ತು ಕವಿತೆಗೆ ನೂತನ ಅರ್ಥವಂತಿಕೆ ಹಾಗೂ ಅರ್ಥಗಳನ್ನು ಕಲ್ಪಿಸಿಕೊಳ್ಳಲು ಸ್ವಾತಂತ್ರ್ಯವನ್ನು ಹೊಂದಿದ್ದಾನೆ. ಯಾವುದೇ ಉತ್ತಮ ಕಾವ್ಯ ಎಂದಿಗೂ ಪೂರ್ತಿಯಾಗಿ ಬರೆದು ಮುಗಿಸಲ್ಪಟ್ಟದ್ದಿಲ್ಲ. ಅದ ಪ್ರತಿ ಬಾರಿಯೂ ಪ್ರತಿಯೊಬ್ಬನೂ ಓದಿದಾಗ ಹೊಸದಾಗಿ ಕಂಡರಿಸಲ್ಪಡುತ್ತದೆ. ಕವನ ಬರೆಯುವವನ ಮುಖ್ಯ ಬಂಡವಾಳ ಅನುಭವಗಳಿಗೆ ತೆರವಾದ ಮನಸ್ಸು, ತೀವ್ರತೆ ಹಾಗೂ ಹೃದಯವಂತಿಕೆ. ಬುದ್ಧಿವಂತಿಕೆ, ಜ್ಞಾನ ಇವೆಲ್ಲ ಅವನ ಅಭಿವ್ಯಕ್ತಿಯನ್ನು ಉಜ್ವಲಗೊಳಿಸಲು ನೆರವಾಗಬಹುದೇ ವಿನಾ ಕವನ ರಚನೆಗೆ ಅವು ಬಂಡವಾಳ ಅಥವಾ ಪ್ರಚೋದನೆಯಾಗುವುದು ವಿರಳ ಕವನ ಬದುಕಿನ ಅಸ್ತಿತ್ವದ, ವ್ಯಕ್ತಿಯ ಬಗ್ಗೆ ಕವಿಯ ಶ್ರದ್ಧೆಯೊಳಗಿಂದ ಮೂಡಿ ಬರುತ್ತದೆ. ಆದ್ದರಿಂದ ಕವನದ ಅರ್ಥವಂತಿಕೆಯೆಂಬುದು-ಬದುಕನ್ನು ಅದು ಎಷ್ಟರಮಟ್ಟಿಗೆ ಪ್ರತಿಫಲಿಸಿ, ಕನ್ನಡಿಗೆ ಹಿಡಿದು ಕನ್ನಡಿಯ ಹಾಗೆ ಅಖಂಡವಾದ, ಅನಂತವಾದ ಪ್ರತಿಫಲನ-ಸಂಭಾಷಣೆಗೆ ಸಾಧ್ಯ ಮಾಡಿ ಕೊಡುತ್ತದೆ-ಎಂಬುದನ್ನು ಅವಲಂಬಿಸಿದೆ. ಮತ್ತು ಕವಿಯ ಹಾಗೇ ಕವನವನ್ನು "ರಚಿಸುವುದು" ಕಷ್ಟ; ಒಬ್ಬ ಕವಿಯನ್ನು 'ತಯಾರು ಮಾಡಲು' ಸಾಧ್ಯವಿಲ್ಲ. ಹಾಗೇ ಒಂದು ಉತ್ತಮ ಕವನವನ್ನು 'ತಯಾರಿಸಲು' ಕಷ್ಟ; ಅದು ತಾನಾಗಿ ಮೂಡಿ ಬರುತ್ತದೆ. ಕವಿಯ ಹೃದಯದಿಂದ ಬಂದು, ನಿಮ್ಮ ಹೃದಯದಲ್ಲಿ ಇರಲು ಶುದ್ಧ ಸಂತೋಷದ ಹಾಗೆ ನಿರ್ನಿಮಿತ್ತ ಆನಂದದ ಹಾಗೆ ಮುಗ್ಧವಾಗಿ ಬಯಸುತ್ತದೆ.

(ಕೃಪೆ : ದಿ ಕ್ರಿಶ್ಚಿಯನ್ ಸೈನ್ಸ್ ಮಾನಿಟರ್, ಯು. ಎಸ್. ಎ.)

ಸಿಡಿಲೊಡನೆ ಕಾದುವಂಗೆ ಕೊಡೆಯೊಂದು ಮರೆಯೆ ?
ಪರ್ವತವ ಹೊರುವಂಗೆ ಸಿಂಬೆಯೊಂದು ಸಹಾಯವೆ ?

—ಪ್ರಭುದೇವ

ಸೃಷ್ಟಿಯ ಸಂದೇಶವನ್ನು ಪುಸ್ತಕಗಳು ಮೌನದಿಂದ ಸಾರುತ್ತವೆ. ಇವನ್ನು ಬೆಲೆಯಿಂದ ನಿರ್ಧರಿಸಬಾರದು. ಹಸುವನ್ನು ಕರೆದು ನೋಡ ಬೇಕು. ಪುಸ್ತಕವನ್ನು ಓದಿ ನೋಡಬೇಕು. ಒಂದು ಹಾಲನ್ನು ಕರೆದರೆ ಇನ್ನೊಂದು ರಕ್ತವನ್ನೇ ಸೂಸುವುದು. ಆ ರಕ್ತ ಸಂದೇಶದಲ್ಲಿ ನೀನು ಜೀವನದಿಂದಾಚೆಗಿರುವ ಜೀವನದ ಅಂತಿಮ ಗುರಿಯನ್ನೇ ಕಂಡುಕೊಳ್ಳುವಿ.

—ಹಿರೇಮಲ್ಲೂರ ಈಶ್ವರನ್ [ಶಿವನಬುಟ್ಟಿ. ಪು 48]

ಕಾವ್ಯವಾಹಿನಿ



ಬಾರಯ್ಯ ನಂಜುಂಡ

—ಎಸ್. ಜಯಸಿಂಹ

ಬಾರಯ್ಯ ನಂಜುಂಡ
ಗಿರಿಜಮ್ಮನಾ ಗಂಡ
ಕಾರ್ಕೋಟವಾ ನುಂಡ
ಮಹರುದ್ರನೇ !!

ಬಾರೋ ಗಿರೀಶನೇ
ಕೈಲಾಸವಾಸನೇ
ಭೂತ ಗಣೇಶನೇ
ಬಾ ಬಾರಯ್ಯಾ !

ಸ್ಮಶಾನ ಸಂಚಾರಿ
ಮನ್ಮತ ಸಂಹಾರಿ
ವಿಚಿತ್ರ ಸಂಸಾರಿ
ನೀ ಬಾರಯ್ಯಾ !

ಬೂದಿಯ ಪಟ್ಟೆಯ
ಚರ್ಮದ ಬಟ್ಟೆಯ
ಸಿಟ್ಟಿನ ಹೊಟ್ಟೆಯ
ಮುಕ್ಕಣ್ಣನೇ !

ಗಂಗೆಯ ಹೊತ್ತಿಹ
ಸರ್ಪವ ಸುತ್ತಿಹ
ಜಗವನ್ನು ಪೆತ್ತಿಹ
ಮಹದೇವನೆ !

ನಂದಿಯ ನೇರಿದ
ಅರವಿಂದ ನಯನ
ಸಿಂಧೂರ ವದನ
ಗಿರಿಜಾ ರಮಣ !

ಬಾರಯ್ಯ ಕರುಣ
ಮುಕ್ಕೋಟಿ ಕಿರಣ
ಭವ ಭಯ ಹರಣ
ಸುರಮಣಿಯೇ !

ಬಾರಯ್ಯಾ ಕರೆಯುವೆ
ಬಾ ಬಾರೋ ದೊರೆಯೇ
ಭಕುತರ ಸಿರಿಯೇ
ಪರಶಿವನೇ !

ನೀ ಸುಟ್ಟ ಕಾಮನು
ಮತ್ತುಟ್ಟಿ ಬಂದನು
ಬಿಟ್ಟಿರಲಾರೆನೋ
ಜಟಿಧಾರಿ !

ದೂರದ ಕಾಶಿಗೆ
ಬಂದಿರಲಾರೆನೋ
ಬಾ ಬಾರೋ ನನ್ನೆದೆಗೆ
ಮನದೊಡೆಯಾ !

ತೀರನೇರು.......ಬಾ

—"ಕವಿತಾಕೃಷ್ಣ"

ತೀರನೇರು ಬಾ ತಾಯಿ ತೀರನೇರು ಬಾ
ಕರುನಾಡ ಸಿರಿದೇವಿ ಹೊನ್ನತೀರನೇರು ಬಾ ||ಪ||

ಪಂಪ ರನ್ನ ಹರಿಹರಾರ್ಯ ರಾಘವಾಂಕರು
ನಿನ್ನ ಮಹಿಮೆ ನುಡಿಸುತ ಮೈಯ ಮರೆತರು |
ಹಕ್ಕಬುಕ್ಕ ಚಾಲುಕ್ಯ ರಾಷ್ಟ್ರಕೂಟರು
ನಿನ್ನ ತೇರ ಸಿಂಗರಿಸಿ ಕಾದು ನಿಂತರು ||

ಕನಕ ವಿಜಯ ಪುರಂದರ ದಾಸವರ್ಯರು
ಭಕ್ತಿಗಂಗೆ ಹೊತ್ತುತಾ ಬಂದು ನಿಂತರು |
ಬಸವ ಮಾಚ ಮಹಾದೇವಿ ಚೆನ್ನಬಸವರು
ನೀತಿ ತತ್ವ ತವನಿಧೀ ಪಿಡಿದು ಬಂದರು ||

ಹಳೆಯಬೀಡು ಬೇಲೂರ ಕಲೆಯನು ಕೂಡಿ
ರಂಜಿಸುತ್ತಲಿಹುದು ಸಿರಿಗನ್ನಡ ತೇರು |
ಕಂಗು ತೆಂಗು ಕದಳಿ ಮಾವು ತರುಗಳ ತುಂಬಿ
ಕಂಪ ಸೂಸುತಿಹುದು ಶ್ರೀ ಗಂಧದ ತೇರು ||

ಕಾವೇರಿ ಕಪಿಲೆ ಕೃಷ್ಣೆ ತುಂಗೆಯರೆಲ್ಲಾ |
ನಿನ್ನ ಅಡಿಯ ತೊಳೆಯುತ ಹರಿಯುವರಲ್ಲ |
ವಿಜಯ ವಿದ್ಯಾರಣ್ಯ ನಾರಯಣರೆಲ್ಲಾ |
ಪೂರ್ಣಕುಂಭಗಳನು ಪಿಡಿದು ಬರುತಿಹರಲ್ಲ ||

ಕನ್ನಡಾಂಬೆ ನಿನ್ನ ಸುತರು ಕರವಕೂಡಿಸಿ
ಜಯಕನ್ನಡ–ಸಿರಿಗನ್ನಡ ಎಂದು ನುಡಿಯುತು |
ನೀನು ಬರುವ ಹಾದಿಯಲ್ಲಿ ಗಂಧಕುಸುಮ ಚೆಲ್ಲಿ
ನಿನಗಾಗಿ ಕಾದಿಹರು ಒಮ್ಮನದಿ ಕಲೆಯುತ ||

ಮೂತ್ರಾಂಗಗಳ ಜನ್ಯವ್ಯಾಧಿ

ಉರಿಯೂತ

(Renal Infection)

—ಡಾ|| ಬೆಂ. ಗು. ಚಂದ್ರಶೇಖರ್.

> ಮೂತ್ರಾಂಗಗಳಿಗೆ ತಗಲುವ ಜನ್ಯವ್ಯಾಧಿ ಪ್ರಬಲವಾದ ಕಾಯಿಲೆ. ಅದರ ಲಕ್ಷಣ ಪರಿಹಾರಗಳು ಗೊತ್ತಿಲ್ಲದೆ ಬಹಳ ಜನ ನರಳುತ್ತಾರೆ. ಈ ವ್ಯಾಧಿಯ ಲಕ್ಷಣ-ವಿಧಗಳು ಪರಿಹಾರಕ್ರಮ-ಇವುಗಳನ್ನು ಮಾನ್ಯ ಲೇಖಕರು ವೈಜ್ಞಾನಿಕವಾಗಿ ನಿರೂಪಿಸಿದ್ದಾರೆ. – ಸಂ.

ದೇಹದ ಪ್ರತಿಯೊಂದು ಅಂಗಗಳಿಗೂ ಜನ್ಯವ್ಯಾಧಿಯು ತಗಲುವಂತೆ ಮೂತ್ರಾಂಗಗಳಿಗೂ ಇದು ತಗಲುತ್ತದೆ. ಮೂತ್ರಾಂಗಗಳ ಅನೇಕ ವ್ಯಾಧಿಗಳಲ್ಲಿ ಜನ್ಯವ್ಯಾಧಿಯು ಮುಖ್ಯವಾದದು. ಹಾಗೂ ಪ್ರಧಾನವಾದುದು. ಇದನ್ನು ಉಪ್ಪಿನ ಖಾಯಲೆ ಎಂದು ಕರೆಯುವುದುಂಟು.

ಕಾರಣಗಳು (Aetiology) :

ಈ ವ್ಯಾಧಿಯು ಕೆಳಕಂಡ ಯಾವ ವಿಧದಲ್ಲಿಯಾದರೂ ಉಂಟಾಗ ಬಹುದು.

ಅ) ರಕ್ತದ ಮೂಲಕ (Halmatogenous) :

ವ್ಯಾಧಿಗ್ರಸ್ಥವಾದಗಂಟಲು ಗ್ರಂಥಿ (Infected Tonsils), ಹುಳುಕು ಹಲ್ಲು (Carsis Tooth), ಚರ್ಮವ್ಯಾಧಿ ಮುಂತಾದುವುಗಳಿಂದ ರೋಗಾಣುಗಳು ರಕ್ತದ ಮೂಲಕ ಮೂತ್ರಾಂಗಗಳನ್ನು ಸೇರುತ್ತವೆ.

ಆ) ವಸಾ (Tymph) ಮೂಲಕ :

ಇ) ಮೂತ್ರ ಕೋಶದಿಂದ ಮೂತ್ರನಾಳದ ಮೂಲಕ (Through the uriter) :

ಮೂತ್ರಾಂಗಗಳ ಅಂತ್ಯಭಾಗದಲ್ಲಿ ಅಡಚಣೆಯಾದರೆ ಮೂತ್ರಕೋಶವು ಮೂತ್ರದಿಂದ ತುಂಬಿ ಅದು ಮುಂದೆ ಮುಂದೆ ಹೋಗದೆ ಅಲ್ಲೇ ತಂಗಿದ್ದು ಅದರಲ್ಲಿನ ರೋಗಾಣುಗಳು ಮೂತ್ರನಾಳದ ಮೂಲಕ ಪ್ರಸರಿಸಿ ಮೂತ್ರ ಪಿಂಡವನ್ನು ತಲುಪುತ್ತವೆ. ಶೇ. 80ಭಾಗ ಪುರುಷರು ಹಾಗೂ 30 ಭಾಗ ಸ್ತ್ರೀಯರಲ್ಲಿ ಇದು ಮುಖವಾದ ಕಾರಣ.

ವಿಧಗಳು :

ಇದರಲ್ಲಿ ಹ್ರಸ್ವಾವಧಿ (Acute) ಮತ್ತು ದೀರ್ಘಾವಧಿಗಳೆಂದು (Chronic) ಎರಡು ವಿಧ. ಇದು ಮೂತ್ರಾಂಗಗಳ ಯಾವ ಭಾಗಗಳಿಗಾದರೂ ತಗುಲಬಹುದು ಅವುಗಳಲ್ಲಿ ಗ್ಲಾಮರುಗಳ ಜನ್ಯವ್ಯಾಧಿ, ಮೂತ್ರ ಪಿಂಡದ ಕಟಿ (Pelvis of Kidney)ಯ ಜನ್ಯವ್ಯಾಧಿ, ಮೂತ್ರನಾಳದ ಜನ್ಯವ್ಯಾಧಿ (Ureteretis) ಮೂತ್ರದ್ವಾರದ ಜನ್ಯವ್ಯಾಧಿ (Urethritis) ಎಂದು ಅನೇಕ ವಿಧಗಳುಂಟು ಅವುಗಳಲ್ಲಿ ಮೊದಲನೆಯ ಎರಡು ಬಹಳ ಮುಖ್ಯವಾದುವುಗಳು.

ಗ್ಲಾಮೇರುಲೈನ ಜನ್ಯವ್ಯಾಧಿ (Glomerulonephritis) :

ಇಕ್ಕೆಡೆಗಳ ಮೂತ್ರ ಪಿಂಡದ ವ್ರಣರಹಿತ ಗೊಂದಲಕ್ಕೆ ಗ್ಲಾಮರುಲೈನ ಜನ್ಯವ್ಯಾಧಿ ಎನ್ನುತ್ತೇವೆ. ಎಲ್ಲೀಸ್ (Ellis) ಎಂಬುವನು ಅನೇಕ ಲಕ್ಷಣಗಳ ಹೋಲಿಕೆಗಳುಳ್ಳವುಗಳನ್ನು ಒಂದೊಂದು ಗುಂಪುಗಳನ್ನಾಗಿ ಮಾಡಿ ಎರಡು ಮುಖ್ಯ ಭಾಗಗಳಾಗಿ ವಿಂಗಡಿಸಿದನು. ಇದು ಎಲ್ಲೀಸ್‌ನ ಮೊದಲನೆಯ ಗುಂಪಿಗೆ (Ellis Type 1) ಸೇರುತ್ತದೆ.

ಪೊರೆಯ ಗ್ಲಾಮರುಲೈನ ಜನ್ಯವ್ಯಾಧಿ (Membrenous glomerulone phritis)ಯು ಎಲ್ಲೀಸ್‌ನ ಎರಡನೆಯ ಗುಂಪಿಗೆ ಸೇರುತ್ತದೆ. ಇದನ್ನು ಮತ್ತೆ ಅವಧಿಯ ಆಧಾರದ ಮೇಲೆ ಹ್ರಸ್ವಾವಧಿಯ ಗುಂಪು ಮತ್ತು ದೀರ್ಘಾವಧಿಯ ಗುಂಪು ಎಂದು ವಿಂಗಡಿಸಬಹುದು. ಹ್ರಸ್ವಾವಧಿಯ ಗುಂಪಿಗೆ ಸೇರಿದ ಎಲ್ಲಾ ರೋಗಿಗಳೂ ಪೂರ್ಣವಾಗಿ ಚೇತರಿಸಿಕೊಳ್ಳಲಾರರು.

ಕಾರಣಗಳು :-

ಹ್ರಸ್ವಾವಧಿಯ ಗಂಟಲು ಗ್ರಂಥಿ ವ್ಯಾಧಿ (Acute Tonsillitis) ಅರುಣ ಜ್ವರ (Scarlet feuer) ಆದಿಭಾಗದ ವಾಯುನಾಳದ ಗೊಂದಲಗಳು (Upper Respiratory traet Infection) ಮುಖ್ಯ ಕಾರಣಗಳು. ಇದು ಸಾಮಾನ್ಯವಾಗಿ ಶಿಶುಗಳು ಮತ್ತು ತರುಣರಲ್ಲಿ ಪ್ರಾಪ್ತವಾಗುತ್ತದೆ.

I ಎಲ್ಲೀಸ್‌ನ ಮೊದಲನೆ ನಮೂನೆ (Ellis type 1 nephritis) or (Acute Glomerulonephritis) :-

ಇದು ಪ್ರಧಾನ ವಿಧಾನ. ಶಿಶುಗಳಲ್ಲಿ ಮತ್ತು ಪ್ರಾಪ್ತ ವಯಸ್ಕರಲ್ಲಿ ಕಾಣಿಸಿಕೊಳುತ್ತದೆ. ಆದರೆ ಯಾವ ವಯಸ್ಸಿನಲ್ಲಿ ಬೇಕಾದರೂ ಬರಬಹುದು.

ಕಾರಣಗಳು :-

ಗಂಟಲು ಗ್ರಂಥಿಯ ವ್ಯಾಧಿ ಮೊದಲು ಕಾಣಿಸಿಕೊಳ್ಳುತ್ತದೆ. ಕೆಲವೊಮ್ಮೆ ಚಳಿಯೊಂದೇ ಕಾಣಿಸಿಕೊಳ್ಳಬಹುದು. ಒಮ್ಮೊಮ್ಮೆ ಮಧ್ಯ ಕಿವಿವ್ಯಾಧಿ (Middle Ear Infection, otmtis Media) ಗಡುವಿನ ಜ್ವರ, ಪುಪ್ಪುಸ ಜ್ವರ (Pneumonia) ಚರ್ಮ ವ್ಯಾಧಿ ಮುಂತಾದವುಗಳಿಂದ ಈ ವ್ಯಾಧಿ ಬರುತ್ತದೆ. ಸುಟ್ಟ ಗಾಯದ ನಂತರವೂ ಇದು ಕಾಣಿಸಿಕೊಳ್ಳಬಹುದು.

ಮೊದಲನೆಯ ಮಹಾಯುದ್ಧದ ಸಂದರ್ಭದಲ್ಲಿ ಕಾಲುವೆ ಮೂತ್ರ ಪಿಂಡ ವ್ಯಾಧಿ (Trench nephritis) ಯನ್ನು ಕಂಡೆವು.

ಲಕ್ಷಣಗಳು (Symptoms) :-

ಇದು ಸಾಮಾನ್ಯವಾಗಿ ಪ್ರಬಲ ವೇಧನೆಯದು ಬಾವು (Oedema), ರಕ್ತ ಮೂತ್ರ (Haematurio), ರಕ್ತದ ಅತಿ ಒತ್ತಡ (Highblood pressure; Hypestention) ವು ಗಂಟಲು ನೋವು ಬಂದನಂತರ ತಲೆದೋರಬಹುದು. ಕೆಲವು ದಿವಸದ ನಂತರ ವಾಕರಿಕೆ (Nasuea), ವಾಂತಿ, ಪಿತ್ತನೀರು (Biliousness), ಹೊಟ್ಟೆನೋವು, ತಲೆ ಶೂಲೆ, ಭೇದಿ ಮುಂತಾದುವುಗಳನ್ನು ಕಾಣಬಹುದು. ಕೆಲವೊಮ್ಮೆ ಬೆನ್ನು ಅಥವಾ ಹೊಟ್ಟೆನೋವು ಕಾಣಿಸಿಕೊಂಡು ನಂತರ ಬಾವು ಉಂಟಾಗುತ್ತದೆ. ಬಾವು ಮೊದಲು ಮುಖ ನಂತರ ಕೈ ಕಾಲುಗಳಿಗೆ ಆವರಿಸಿ ಕೊನೆಯಲ್ಲಿ ದೇಹದ ಇತರ ಎಲ್ಲಾ ಭಾಗಗಳಿಗೂ ಹರಡುತ್ತದೆ ಕೆಲವು ವೇಳೆ 102°F–103°F ನವರೆಗೆ ಜ್ವರವಿದ್ದರೂ ಮೈ ಮಾತ್ರ ಬೆಚ್ಚಗಿರುವಂತೆ ತೋರಬಹುದು. ಮೂತ್ರದ ಪ್ರಮಾಣವು ಕಡಿಮೆಯಾಗಿ ಸಂಪೂರ್ಣವಾಗಿ ನಿಂತು ಹೋಗಬಹುದು (Anuria) ಮೂತ್ರವು ಹೊಗೆಯಂತಿರಬಹುದು. (Smoky urine)

ಮೂತ್ರ ಪರೀಕ್ಷೆಯು ಅತಿ ಮುಖ್ಯ ಗೊಂದಲಗಳು (Complications) :-

ಹೃದಯಾಘಾತ (Heart Failure), ತುಸುಮೂತ್ರ (Anuria), ಜನ್ಯವ್ಯಾಧಿ (Focus Infection) ಮತ್ತು, ರಕ್ತದ ಅತಿ ಒತ್ತಡಗಳು ಈ ರೋಗದ ಗೊಂದಲಗಳು.

ರೋಗ ನಿರ್ಧಾರ (Diagnosis) :-

ರಕ್ತದ ಒತ್ತಡ, ಪಿಷ್ಟಮೂತ್ರ (Proteinuria Allriminuria) ರಕ್ತ ಮೂತ್ರ, ಲನೆಯ ಕಣ (Granular cast) ತುಸು ಮೂತ್ರ ಮುಂತಾದುವುಗಳು ರೋಗ ನಿರ್ಧಾರಕ್ಕೆ ಸಹಾಯ ಮಾಡುತ್ತವೆ.

ಚಿಕಿತ್ಸೆ :

ರೋಗಿಗೆ ಪೂರ್ಣ ವಿಶ್ರಾಂತಿ ಅತ್ಯವಶ್ಯಕ. ರಕ್ತ ಒತ್ತಡ, ಮೂತ್ರ ವಿಸರ್ಜನೆಯ ಪ್ರಮಾಣ ದ್ರವವನ್ನು ತೆಗೆದುಕೊಳ್ಳುವ ಅಳತೆ . ಸೂಕ್ಷ್ಮ ದರ್ಶಕ ಯಂತ್ರದಿಂದ ಮೂತ್ರ ಪರೀಕ್ಷೆ ಪ್ರತಿದಿನವೂ ಅವಶ್ಯಕ. ಇತರೆ ಕಾಯಿಲೆ ಇದ್ದಲ್ಲಿ ಚಿಕಿತ್ಸೆ ನಡೆಸಬೇಕು, ಪಿಷ್ಟಪದಾರ್ಥಗಳನ್ನು ಒದಗಿಸಬೇಕು. ಉಪ್ಪಿನ ಪದಾರ್ಥಗಳನ್ನು ಸಾಧ್ಯವಾದಷ್ಟು ಕಡಿಮೆ ಮಾಡಬೇಕು. ಮೂತ್ರ ವರ್ಧಕಗಳನ್ನು (Duiretics) ನಿಷೇಧಿಸಬೇಕು.

ಬಾವು ಕಡಿಮೆಯಾಗುವತನಕ ಹಾಗೂ ರಕ್ತದ ಒತ್ತಡ ನಿರ್ದಿಷ್ಟ ಪ್ರಮಾಣಕ್ಕೆ ಬರುವ ತನಕ ರೋಗಿಯು ಹಾಸಿಗೆಯಲ್ಲಿರಬೇಕು.

ಫಲಿತಾಂಶ :

ಶೇ. 80–90 ಮಂದಿಯು ರೋಗದಿಂದ ಪೂರ್ಣವಾಗಿ ಗುಣಮುಖರಾಗುತ್ತಾರೆ. ಶೇ. 5 ಮಂದಿಯಲ್ಲಿ ರೋಗವು ಅತಿಬೇಗ ಪ್ರಗತಿ ಹೊಂದಿ (Highly progressive) ಬಾವು ಮತ್ತು ರಕ್ತ ಒತ್ತಡದ ಹಾಗೆ ಇದ್ದು ಮೂತ್ರ ಭಂಗ (Renal Failure) ವಾಗಬಹುದು. ಉಳಿದ 5 ಭಾಗದಲ್ಲಿ ರೋಗವು ನಿಧಾನವಾಗಿ ಪ್ರಗತಿ ಹೊಂದಿ ತುಸುಗ್ರ (Chronic) ಹಂತವನ್ನು ತಲುಪುತ್ತವೆ.

ಎಲ್ಲೀಸನ ಎರಡನೆ ವಿಧ (Ellis type 2, Membrenous Glomerulonephritis) :

ಇದು ವಿರಳ, ಕಾರಣವು ಅನಿರ್ದಿಷ್ಟ.

ಲಕ್ಷಣಗಳು :-

ಮೂತ್ರವನ್ನು ಪರೀಕ್ಷಿಸುವಾಗ ಅದು ಅನಿರೀಕ್ಷಿತವಾಗಿ ಪಿಷ್ಟ ಪದಾರ್ಥ (Alirmin, proteio) ದಿಂದ ಕೂಡಿರುವುದನ್ನು ಕಾಣಬಹುದು. ಇದಾದ ಕೆಲವು ವರ್ಷಗಳ ನಂತರ ಬಾವು ಕಾಣಿಸಿಕೊಳ್ಳುತ್ತದೆ. ಇದು ಎಲ್ಲೀಸನ ಮೊದಲನೆಯ ವಿಧದಂತೆಯೇ ಇರುತ್ತದೆ. ಕೆಲವು ವೇಳೆ ಹಸಿವಾಗದಿರುವಿಕೆ (Dyspepsia) ನಿಶ್ಯಕ್ತಿ, ಕಿಬ್ಬೊಟ್ಟೆಯ ಶೂಲೆ ಮುಂತಾದವುಗಳಿರಬಹುದು.

ಗೊಂದಲಗಳು :-

ಶ್ವಾಸಕೋಶದ ಬಾವು (Pulmonary oedema) ಮೂತ್ರಅಭಿಧಮನಿಯ ರಕ್ತ ಗಡ್ಡೆ (Renal veinvthromhosis) ವ್ರಣ. (Abscess)

ರೋಗ ನಿರ್ಧಾರ (Diagnosis) :-

ರೋಗವು ಅತಿ ನಿಧಾನವಾಗಿ ಪ್ರಾರಂಭವಾಗುತ್ತದೆ. ಬಾವು, ಪಿಷ್ಟ ಮೂತ್ರ (alluminuria) ರೋಗ ನಿರ್ಧಾರಕ್ಕೆ ಸಹಾಯ ಮಾಡುತ್ತದೆ.

ಚಿಕಿತ್ಸೆ :-

ವಿಶ್ರಾಂತಿ, ಪಿಷ್ಟ ಪದಾರ್ಥಗಳನ್ನು ಹೆಚ್ಚಾಗಿ ಒದಗಿಸಬೇಕು. ಲವಣವನ್ನು ಸ್ವಲ್ಪ ಮಾತ್ರ ಉಪಯೋಗಿಸಬೇಕು.

ಫಲಿತಾಂಶ :-

ಈ ವ್ಯಾಧಿಯು ಶಿಶುಗಳಿಗೆ ಬಂದರೆ ಸಂಪೂರ್ಣ ವಾಸಿಯಾಗುತ್ತದೆ. ವಯಸ್ಕರಲ್ಲಿ ಪೂರ್ಣ ವಾಸಿಯಾಗುವಿಕೆಯು ಅತಿ ವಿರಳ. ಕೆಲವು ಮಂದಿಗೆ ಅತಿರಕ್ತದ ಒತ್ತಡವು ಹಾಗೆ ನಿಲ್ಲುತ್ತದೆ. ಅನೇಕ ಮಂದಿ ಪುರುಷರಲ್ಲಿ ಬಾವು, ಸಾಧಾರಣವಾದ ರಕ್ತ ಒತ್ತಡ ಮತ್ತು ಪಿಷ್ಟ ಮೂತ್ರವು ಹಾಗೆ ಉಳಿದುಕೊಳ್ಳಬಹುದು. 2–3 ವರ್ಷಗಳನಂತರ ಪ್ರಗತಿಪರ ಮೂತ್ರಾಂಗ ಕಾರ್ಯ ನಾಶವಾಗುತ್ತದೆ. ತುಸುಗ್ರ ವಿಧದಲ್ಲಿ ಬಾವು ನಿಧಾನವಾಗಿ ಮಾಯವಾಗಿ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತಿರಬಹುದು.

II ಮೂತ್ರಪಿಂಡದ ಕಟಿಯ ಜನ್ಯವ್ಯಾಧಿ (Pyelonephritis) :

ಇದು ಸ್ತ್ರೀಯರ ಸಂಭೋಗದ ಮೂಲಕ ಹರಡುತ್ತದೆ. (Honeymoon cystitis) ಗರ್ಭಕೋಶದ ಒತ್ತಡ ಮೂತ್ರ ಕಲ್ಲು (Renal stone) ಮೂತ್ರದ್ವಾರ ಖಂಡನೆ (Stricture urethra) ಅಭಯ ಗ್ರಂಥಿಯ ಉಬ್ಬುವಿಕೆ (Enlargement of prostate) ಮತ್ತು ಮೂತ್ರಾಂಗ ಅಥವಾ ಉದರದೊಳಗಿನ ಗಡ್ಡೆಗಳು ಈ ರೋಗದ ಕಾರಣಗಳು.

ಲಕ್ಷಣಗಳು :

ಇದು ಅನೇಕ ವೇಳೆ ಲಕ್ಷಣ ರಹಿತವಾಗಿರಬಹುದು. ಮೂತ್ರವು ಅನೇಕ ಭಾರಿ ವಿಸರ್ಜನೆಯಾಗಬಹುದು. ನೋವಿನಿಂದೊಡಗೂಡಿದ ಮೂತ್ರ ಮತ್ತು ಅತ್ಯುಗ್ರಾವಸ್ಥೆಯಲ್ಲಿ ಸುಸ್ತು, ಚಳಿ, ಅತಿಜ್ವರ, ವಾಂತಿ, ತಲೆಶೂಲೆ, ಮಲಬದ್ಧತೆ, ಸೊಂಟನೋವು, ಮೂತ್ರಪಿಂಡಕೋಶದ ನೋವು (Renal Angle Pain) ಇವು ಆಗಾಗ್ಗೆ ಬರುತ್ತವೆ.

ನಿರ್ಧಾರ :-

ಕೀವಿನಿಂದೊಡಗೂಡಿದ ಮೂತ್ರ, ಜೀವಾಣುಗಳ ಬೆಳವಣಿಗೆಯ ಪರೀಕ್ಷೆ ಮತ್ತು ಕ್ಷ ಕಿರಣ ಪರೀಕ್ಷೆಗಳು ರೋಗ ನಿರ್ಧಾರಕ್ಕೆ ಸಹಾಯ ಮಾಡುತ್ತವೆ.

ಚಿಕಿತ್ಸೆ :-

ಮೂತ್ರ ಬಂಧನವನ್ನು ತಡೆಗಟ್ಟಬೇಕು. ಅತ್ಯುಗ್ರಾವಸ್ಥೆಯನ್ನು ಚುಚ್ಚುಮದ್ದಿನಿಂದ ವಾಸಿ ಮಾಡಬೇಕು. ಮೂತ್ರ ದರ್ಶಕಗಳನ್ನು (Renal catheter) ಉಪಯೋಗಿಸಬಾರದು. ಸಂಪೂರ್ಣ ಚಿಕಿತ್ಸೆಯಾದ ನಂತರವೂ ಮೂತ್ರವು ರೋಗಾಣುಗಳಿಂದ ಕೂಡಿದ್ದರೆ ಪರೀಕ್ಷಿಸಿ ತಕ್ಕ ಚಿಕಿತ್ಸೆ ನಡೆಸಬೇಕು.

ಮೂತ್ರಾಂಗ ಕ್ಷಯ (Renal Tuberculosis) :

ಇದು ಸಾಮಾನ್ಯವಾಗಿ ದೇಹದ ಇತರ ಭಾಗಗಳ ಕ್ಷಯದಿಂದ ರಕ್ತದ ಮೂಲಕ ಹರಡುತ್ತದೆ. ಮೂತ್ರಪಿಂಡದ ಹೊರ ತೊಕ್ಕಿನಲ್ಲಿ (Renal cortex) ಪ್ರಾಥಮಿಕ ಬದಲಾವಣೆಯಾಗಿ (Primary changes) ಚಿಕಿತ್ಸೆ ನಡೆಸದಿದ್ದಲ್ಲಿ ಅದು ಗಾಯವಾಗಿ ಮೂತ್ರ ಕೋಶ, ಅಭಯ ಗ್ರಂಥಿ ಮುಂತಾದುವುಗಳಿಗೆ ಹರಡುತ್ತದೆ. ಇದು ಎಳೆಯ ವಯಸ್ಸಿನಲ್ಲಿ ಪ್ರಾಪ್ತವಾಗುತ್ತದೆ. ನೋವಿನಿಂದ ಕೂಡಿದ ಮೂತ್ರ ವಿಸರ್ಜನೆಯು ಅನೇಕ ಬಾರಿಯಾಗುತ್ತಿರುತ್ತದೆ. ರಕ್ತ ಮೂತ್ರವನ್ನು ಸಹ ಇಲ್ಲಿ ಕಾಣಬಹುದು.

ಇದನ್ನು ಕ್ಷಯ ರೋಗದ ಔಷಧಗಳಿಂದ ಚಿಕಿತ್ಸಿಸಬಹುದು. ಕೆಲವು ವೇಳೆ ಖಂಡ ಅಥವಾ ಪೂರ್ಣ ಮೂತ್ರಪಿಂಡ ವಿಭಜನೆಯು (Partial or Total Nephrectomy) ಅವಶ್ಯಕ.

III ಮೂತ್ರ ರೋಗದಂತಹ ವ್ಯಾಧಿ (Nephrotie Syndsome) :-

ಕಾರಣಗಳು :-

ಇದು ಅನಿರ್ದಿಷ್ಟ. ಜೇನು ನೊಣದ ಕಡಿತ, ಅಲರ್ಜಿ ಪಾದರಸ ಮತ್ತು ಚಿನ್ನದ ವಿಷ ಇವುಗಳು ಕಾರಣಗಳು.

ಲಕ್ಷಣಗಳು :-

ತುಸು ಪಿಷ್ಟರಕ್ತ (Hypoprotinaemia) ಬಾವು, ಅತಿಯಾದ ಕೊಲೆಸ್ಟೆರಾಲ್, ಅಧಿಕ ಸಾರಜನಕ ಪದಾರ್ಥ ಅಥವಾ ಪಿಷ್ಟ ಮೂತ್ರ (Allremin) ಇವು ನಾಲ್ಕು ಈ ರೋಗದ ಮುಖ್ಯ ಲಕ್ಷಣಗಳು. ಇವುಗಳಲ್ಲಿ ಬಾವು ಅತಿಮುಖ್ಯವಾದುದು. ಇದು ದೇಹದಾದ್ಯಂತವಿರುತ್ತದೆ. ಭಯಾನಕ ರೋಗಿಗಳಲ್ಲಿ ಬಾವು ಮುಖ, ಕೈ, ಹೊಟ್ಟೆಯ ಗೋಡೆ (Abdominal wall) ಲೈಂಗಿಕ ಅಂಗಗಳು ಮುಂತಾದ ಕಡೆ ಅಧಿಕವಾಗಿರುತ್ತದೆ. ಜನ್ಯವ್ಯಾಧಿಯ ಸಾಮಾನ್ಯವಾದ ಲಕ್ಷಣ.

ಚಿಕಿತ್ಸೆ :-

ರೋಗಿಯು ಯಾವಾಗಲೂ ಹಾಸಿಗೆಯಲ್ಲಿರಬೇಕು. ಕೆಲವು ವೇಳೆ 1–2 ವರ್ಷಗಳ ನಂತರ ಚಿಕಿತ್ಸೆ ನಡಸದಿದ್ದರೂ ವ್ಯಾಧಿಯು ಕಡಿಮೆಯಾಗುತ್ತದೆ. ಪಿಷ್ಟ ಪದಾರ್ಥಗಳನ್ನು ಹೆಚ್ಚು ಹೆಚ್ಚಾಗಿ ಕೊಡಬೇಕು. ಲವಣವನ್ನು ವರ್ಜಿಸಬೇಕು. ಮೂತ್ರವರ್ಧಕಗಳನ್ನು ಕೊಡಬೇಕು. ದಿವಸಕ್ಕೆ 20 Mg ನಂತೆ ಪ್ರೆಡ್ನಿಸಲೋನ್ ಅನ್ನು ಕೊಟ್ಟಲ್ಲಿ 15 ದಿವಸಗಳಲ್ಲಿ ಲಕ್ಷಣಗಳು ಕಡಿಮೆಯಾಗುತ್ತವೆ.

ಸಾಮಾನ್ಯವಾಗಿ ಜನಗಳು ಈ ರೋಗದ ಲಕ್ಷ್ಯವಿಲ್ಲದೆ ಮುಖವು ದಪ್ಪನಾಗಿ ಬಾವು ಕಾಣಿಸಿ ಕೊಂಡಾಗ ಕಾಮಾಲೆ ಎಂದು ಅಲಕ್ಷಿಸಿ ವೈದ್ಯರನ್ನು ಭೇಟಿಮಾಡದೆ ಅತಿ ನಿಧಾನ ಮಾಡುತ್ತಾರೆ. ಅಷ್ಟರಲ್ಲಿ ಮೂತ್ರ ಪಿಂಡದ ಕಾರ್ಯ ಕಲಾಪಗಳಿಗೆ ಅಡ್ಡಿಯುಂಟಾಗಿ ಮೂತ್ರ ಬಂಧನ, ತುಸುಮೂತ್ರ ಮುಂತಾದ ಗೊಂದಲಗಳುಂಟಾಗಿ ಮೂತ್ರಘಾತವಾಗಿ ರೋಗಿಯು ತೊಂದರೆಗೊಳಗಾಗುತ್ತಾನೆ. ಆದುದರಿಂದ ಈ ರೋಗದ ಲಕ್ಷಣಗಳು ಕಾಣಬರುತ್ತಿದ್ದ ಹಾಗೆಯೇ ಉದಾಸೀನ ಮಾಡದೆ ವೈದ್ಯರನ್ನು ಭೇಟಿಯಾಗಿ ಮೂತ್ರಪಿಂಡದ ರಕ್ಷಣೆಯನ್ನು ಪಡೆಯಲೆಂದು ಈ ಲೇಖನದ ಉದ್ದೇಶ.

ಆಕಸ್ಮಿಕಗಳೇಕೆ?

(Why Accidents?)

ಬಿ. ಗೋ. ರಮೇಶ್.

> ಇಂದಿನ ಅವಸರ ಯುಗದಲ್ಲಿ ಆಕಸ್ಮಿಕಗಳು ಅನಿವಾರ್ಯ. ಪ್ರತಿ ಪೌರನೂ ಅವುಗಳನ್ನು ತಡೆಗಟ್ಟುವ ಪ್ರಯತ್ನ ಮಾಡಬೇಕು. ಅದಕ್ಕೆ ಬೇಕಾದ ಕೆಲವು ಉಪಯುಕ್ತ ಸಲಹೆಗಳನ್ನು ಲೇಖಕರು ಇಲ್ಲಿ ಕೊಟ್ಟಿರುತ್ತಾರೆ. —ಸಂ.

ದಿನ ಬೆಳಗಾಯಿತೆಂದರೆ ವೃತ್ತ ಪತ್ರಿಕೆ ಬರುತ್ತದೆ. ಇದು ಎಲ್ಲರಿಗೂ ತಿಳಿದ ವಿಷಯ. ಆದರೆ ಅವು ಹೊತ್ತು ತರುವ ಸಮಾಚಾರಗಳನ್ನು ಕುರಿತು ಆಲೋಚಿಸುವರು ಎಷ್ಟು ಮಂದಿ? ವೃತ್ತಪತ್ರಿಕೆ ಮೊದಲ ಪುಟದಲ್ಲೆ ಕಾಣುತ್ತೀರಿ. "ರೈಲುಗಳ ಢಿಕ್ಕಿ, ಹದಿನಾರು ಸಾವು; ಪ್ರಪಾತಕ್ಕೆ ಬಸ್ ಉರುಳಿ ಯಾತ್ರಿಕರ ನಾಮಾವಶೇಷ" ಇಂತಹ ಸುದ್ದಿಗಳನ್ನೋದಿ ಮುಂದಿನ ಪುಟವನ್ನು ನೋಡಿ." ಉಕ್ಕು ತಯಾರಿಕಾ ಸ್ಥಾವರದಲ್ಲಿನ ಕುಲುಮೆಯೊಂದರಲ್ಲಿ ಕಾರ್ಮಿಕನು ಬಿದ್ದು ಮೃತನಾದ; ಕಾಂಕ್ರೀಟ್ ಬೆರಸುತ್ತಿದ್ದ ಯಂತ್ರದಲ್ಲಿ ಕೂಲಿಕಾರ ಮಹಿಳೆ ಜಾರಿಬಿದ್ದು ಪುಡಿಪುಡಿಯಾದಳು" ಇವೂ ಅಲ್ಲಿರುತ್ತವೆ. ಒಮ್ಮೆ ಓದುತ್ತೇವೆ. ಅಯ್ಯೋ ಪಾಪ! ಎನ್ನುತ್ತೇವೆ. ಸುಮ್ಮನಿದ್ದು ಬಿಡುತ್ತೇವೆ. ಇಂಥ ಘಟನೆಗಳು ದಿನಕ್ಕೆ ಹತ್ತು, ನೂರು, ಕೆಲವೊಮ್ಮೆ ಎಣಿಕೆಗೂ ಮೀರಿ ಇವೆಲ್ಲ ಆಕಸ್ಮಿಕಗಳು ಅಕಸ್ಮಾತ್ ಜರುಗುವಂಥವು ಎಚ್ಚರಿಕೆ ತಪ್ಪಿ ಆಗಿ ಹೋಗುತ್ತವೆ. ದೇಶದ ಹಲವು ಕಡೆ ಇಂಥವು ಇದ್ದೇ ಇದೆ.

ಹಿಂದೆ ಮಾನವನ ಜೀವ ಮಾರುಕಟ್ಟೆಯಲ್ಲಿ ವಿಕ್ರಯ ವಸ್ತು. ಇಂದು ಮನುಷ್ಯ ಬುದ್ಧಿ ಜೀವಿ. ವ್ಯಾಪಾರ ಸಲ್ಲ. ಸ್ವರಕ್ಷಣೆ ತುಂಬಾ ಅಗತ್ಯ. ಒಬ್ಬನನ್ನು ನಂಬಿ ಅನೇಕರಿರುತ್ತಾರೆ. ಆಕಸ್ಮಿಕದಲ್ಲಿ ಒಬ್ಬ ಕುಟುಂಬಿ ಸತ್ತರೆ ಅದು ಒಬ್ಬನ ಸಾವಲ್ಲ. ಹೆಂಡತಿಗೆ ಗಂಡನಸಾವು; ಮಕ್ಕಳಿಗೆ ತಂದೆಯ ಸಾವು ಸಮಾಜಕ್ಕೆ ನೌಕರನೊಬ್ಬನ ಸಾವು. ಇದನ್ನು ಎದುರಿಸ ಬೇಕಾದುದು ಬಹು ಮುಖ್ಯ ಸಮಸ್ಯೆಯಾಗಿದೆ. ಇದನ್ನೆದುರಿಸುವಲ್ಲಿ ಪ್ರಜಾಪ್ರಭುತ್ವ ಸರ್ಕಾರವೊಂದೇ ಪಾಲುಗೊಂಡರಾಗದು ಪ್ರತಿಪೌರನೂ ತನ್ನ ರಕ್ಷಣೆಗೆ ಮೊದಲು ಮುಂದಾಗ ಬೇಕು. ರಕ್ಷಣಾ ಇಂಜಿನಿಯರಿಂಗ್(Safety Engineering)ವಿಜ್ಞಾನ ನಮ್ಮ ದೇಶದಲ್ಲಿ ಇನ್ನೂ ಬಾಲ್ಯಾವಸ್ಥೆಯಲ್ಲಿರುವುದೂ ಕೂಡ ಆಕಸ್ಮಿಕಗಳಾಗುವುದಕ್ಕೆ ಮಹಾಪೋಷಕವಾಗಿರುವುದನ್ನು ಮರೆಯುವಂತಿಲ್ಲ.

ಆಕಸ್ಮಿಕಗಳು ತಪ್ಪಿಲ್ಲ. ಅವು ಆರ್ಥಿಕ ಹಾಗೂ ಸಾಮಾಜಿಕ ನಷ್ಟಗಳಿಗೆ ಕಾರಣವಾಗುತ್ತಿವೆ. ಜನರ ಧೈರ್ಯಸ್ಥೈರ್ಯಗಳನ್ನು ನಾಶಮಾಡುತ್ತಿವೆ. ಅವನ್ನು ತಪ್ಪಿಸಲು ಸಾಧ್ಯವಿದ್ದರೂ ಯತ್ನಮಾಡದಿರುವುದು ಅಪರಾಧವೆನಿಸಿದೆ. ಆಕಸ್ಮಿಕಗಳು ಹಲವು ಬಗೆ. ರಸ್ತೆ ಇರಬಹುದು, ರೈಲುದಾರಿಯಲ್ಲಿರಬಹುದು, ತೀವ್ರ ಎನಿಸುವ ಕಾರ್ಖಾನೆ ಇರಬಹುದು. ಕಡೆಗೆ ವಿಮಾನ ಅಪಘಾತವೇ ಆಗಿರಬಹುದು. ಯಾವುದೇ ಬಗೆಯದಾದರೂ ನಷ್ಟ ಒಂದೇ. ಇಲ್ಲ ಜೀವಕ್ಕೆ ಧಕ್ಕೆ ಅಥವಾ ಆಸ್ತಿಪಾಸ್ತಿಗೆ ಹಾನಿ. ಎಷ್ಟು ಎಚ್ಚರವಹಿಸಿದರೂ ಆಕಸ್ಮಿಕಗಳು ಜರುಗುತ್ತಲೇ ಇರುವುದಕ್ಕೆ ಮನುಷ್ಯನ ಬಹು ಆತುರದ ಜೀವನವೇ ಮುಕ್ಕಾಲು ಕಾರಣವಾಗಿದೆ. ನಾಗರಿಕತೆ ಮುಂದುವರೆದಂತೆ ಅಪಾಯಗಳು ಅತಿಯಾಗುತ್ತಿವೆ. ಮನುಷ್ಯ ಭೌತಿಕವಸ್ತುಗಳಿಗೆ ದಾಸನಾಗುತ್ತಾ ಆಧ್ಯಾತ್ಮಜೀವನ, ಸ್ವರಕ್ಷಣೆ, ಸಮಾಜರಕ್ಷಣೆ ಇವುಗಳನ್ನು ಮರೆಯುತ್ತಿದ್ದಾನೆ. ದೈವಭಕ್ತಿ, ನಂಬಿಕೆಗಳಂತೂ ಒಂದು ಆಟ (Show)ವಾಗಿದೆ. ನಿಜವಾಗಿ ನಂಬಿಕೆ ಇರುವೆಡೆಗಳಲ್ಲೂ ಮಲಿನತೆ ತರುವ ಜನ ಕಾಣುತ್ತಿದ್ದಾರೆ. ಆಕಸ್ಮಿಕಗಳಿಗೂ ಅಧ್ಯಾತ್ಮಕ್ಕೂ ನಂಟೇನು ಎಂಬ ಪ್ರಶ್ನೆ ಏಳಬಹುದು. ಆಲೋಚಿಸಿ ನೋಡಿದಾಗ ಅಧ್ಯಾತ್ಮದ ಲಾಭ ಪಡೆದಾಗ ಇದರ ಅರಿವುಂಟಾಗುತ್ತದೆ.

ಆಕಸ್ಮಿಕಗಳನ್ನು ತಪ್ಪಿಸಲಾರೆವೆ?

ಎಷ್ಟೋ ಆಕಸ್ಮಿಕಗಳನ್ನು ಸುಲಭವಾಗಿ ತಪ್ಪಿಸ

ಬಹುದಾಗಿದೆ. ಅವು ಉಂಟಾಗಲು ನೆರವಾಗುವುದನ್ನು ಮೊದಲು ನಿಲ್ಲಿಸ ಬೇಕು. ಓಡುತ್ತಿರುವ ಬಸ್ ಏರುವುದು, ವಾಹನಗಳ ಏರುಮೆಟ್ಟಿಲುಗಳಲ್ಲೆ ನಿಲ್ಲುವುದು, ವಾಹನಗಳಲ್ಲಿ ನೂಕುನುಗ್ಗಲಿಗೆ ದಾರಿ ಮಾಡಿಕೊಡುವುದು, ರೈಲುದಾರಿಯಲ್ಲಿ ನಡೆಯುವುದು, ಕಾರ್ಖಾನೆಗಳಲ್ಲಿ ಯಂತ್ರಗಳ ಚಾಲನೆ ಮಾಡಿ ಹರಟೆ ಹೊಡೆಯುತ್ತ ನಿಲ್ಲುವುದು, ವಾಹನಗಳನ್ನು ಬಿಡುವಾಗ ಅಕ್ಕ ಪಕ್ಕದ ಆಕರ್ಷಣೆಗೆ ಬಲಿಯಾಗುವುದು ಇವೆಲ್ಲ ಆಕಸ್ಮಿಕ ಜನಕವಲ್ಲದೆ ಮತ್ತೇನು? ಇವನ್ನು ತಪ್ಪಿಸಲಾರೆವೆ? ಒಬ್ಬನ ಚಪಲ ಮತ್ತೊಬ್ಬನ ಪ್ರಾಣಕ್ಕೆ ಸಂಚಕಾರ ತಂದರೆ? ಒಂದು ಯೋಜನೆ ಯಶಸ್ವಿಯಾಗಬೇಕಾದರೆ ಹಲವಾರು ಬಲಿಯಾಗುವುದು ದೇಶಾಭಿಮಾನವಲ್ಲ. ನೀತಿಯ ನಾಶವಷ್ಟೆ. ಅದಕ್ಕೆ ಬದಲು ಯೋಗ್ಯರಾಗಿ ಕೆಲಸ ಮಾಡುವುದು ಮೇಲಲ್ಲವೆ?

ಆಕಸ್ಮಿಕಗಳನ್ನು ತಪ್ಪಿಸಲು ರಕ್ಷಣಾಚಳುವಳಿಗಳನ್ನು ಹೂಡಬೇಕು. ಪ್ರಾಣರಕ್ಷಣೆಯ ಪ್ರಥಮ ಪಾಠಗಳನ್ನು ಪೌರರಿಗೆ ಕಲಿಸಬೇಕು. ವಿದ್ಯಾರ್ಥಿಗಳಿಗೆ ಆರಂಭದಿಂದಲೆ ಇದರ ಶಿಕ್ಷಣವಾಗಬೇಕು. ಪ್ರಾಮಾಣಿಕ ಪ್ರಯತ್ನವಿದ್ದಲ್ಲಿ ಅಪಾಯ ಎಂದೂ ತೋರುವುದಿಲ್ಲ. ಕಾರ್ಖಾನೆಗಳಲ್ಲಿ ರಕ್ಷಣಾ ವಿಭಾಗಗಳನ್ನು ತೆರೆದು ತಜ್ಞರಿಂದ ಇಂದಿನ ನೂತನ ರಕ್ಷಣಾ ವಿಧಾನಗಳನ್ನು ಕುರಿತು ಕಾರ್ಮಿಕರಿಗೆ ತಿಳಿವಳಿಕೆ ಕೊಡಬಹುದಾಗಿದೆ. ಇದಂತೂ ಸರಳ ಮಾರ್ಗ. ಬ್ರಿಟನ್, ಜಪಾನ್, ಕೆನಡಾ, ಫ್ರಾನ್ಸ್ ಮೊದಲಾದ ದೇಶಗಳಲ್ಲಿ ರಕ್ಷಣಾ ಚಳುವಳಿಗಳು ನಡೆದು ಬಹಳ ಲಾಭವಾಗಿದೆ. ಎಷ್ಟೋ ಆಕಸ್ಮಿಕಗಳು ತಪ್ಪಿ ಹೋಗಿವೆ. ಒಂದು ಆಕಸ್ಮಿಕ ಜರುಗಿದಾಗ ಅದು ಆಗಲು ಏನು ಕಾರಣವೆಂಬುದರ ಅಧ್ಯಯನ ಆಗ ಬೇಕು. ಇದರಿಂದ ಮುಂದೆ ಅಂತಹ ಆಕಸ್ಮಿಕಗಳಾಗದಂತೆ ತಪ್ಪಿಸಲು ಸಾಧ್ಯ ವಾಗುತ್ತದೆ. ಜನರ ಸಹಕಾರವಂತೂ ಅತ್ಯಗತ್ಯ.

ಸ್ವರಕ್ಷಣೆಗೆಯತ್ನಿಸುವುದು ಅಷ್ಟೇ ಅಲ್ಲ ಸಮಾಜದ ರಕ್ಷಣೆಯೂ ಆಗಬೇಕು. ಅದಕ್ಕೆ ಪ್ರತಿಪೌರನ ತೀವ್ರಯತ್ನ ಮುಖ್ಯ ಇದಕ್ಕೆಂದೇ ಕ್ರಿ. ಶ. 1966 ರಲ್ಲಿ ರಾಷ್ಟ್ರೀಯ ರಕ್ಷಣಾ ಮಂಡಳಿಯೊಂದರ ಸ್ಥಾಪನೆಯಾಗಿದೆ. ಅದು ಬೊಂಬಾಯಿನಲ್ಲಿ ತನ್ನ ಕಛೇರಿಯನ್ನು ಹೊಂದಿದ್ದು ರಕ್ಷಣಾ ಕಾರ್ಯದಲ್ಲಿ ಸಾಕಷ್ಟು ಭಾಗಿಯಾಗಿದೆ.

ಆಕಸ್ಮಿಕ (Accident) ವಷ್ಟೆ ಎಂದು ಕೈಬಿಡಬಾರದು. ನಾಳೆ ಅದು ನಮ್ಮನ್ನೆ ನುಂಗಿಹಾಕೀತು! ಎಚ್ಚರವಹಿಸಿದಷ್ಟೂ ಒಳ್ಳೆಯದೆ ಸಿಪ್ಪೆತಾನೆ ಎಂದು ಬಾಳೆಹಣ್ಣು ಸಿಪ್ಪೆಯನ್ನು ರಸ್ತೆಯಲ್ಲಿ ಹಾಕಿದರೆ ಅದರ ಮೇಲೆ ಕಾಲಿಟ್ಟು ಜಾರಿದ ಒಬ್ಬನ ಕಾಲೇ ಮುರಿಯ ಬಹುದು. ಎಸೆದ ನಮ್ಮ ಕಾಲೂ ಇನ್ನಾವುದೋ ದಿನ ಇನ್ನಾರೋ ಎಸೆದ ಸಿಪ್ಪೆಯನ್ನೂರಿ ಮುರಿಯಬಹುದು ಪರಸ್ಪರ ತಿಳಿವಳಿಕೆ ಅಗತ್ಯವಷ್ಟೆ. ಪ್ರಾಣರಕ್ಷಣೆಗಾಗಿ ಇನ್ನಾದರೂ ಎಚ್ಚರ ವಹಿಸೋಣವೆ?

ದಾನಿಗಳು

"ಶಿವಗಂಗೆ ನೋಟಕ್ಕೆ ಸಿದ್ಧಗಂಗೆ ಊಟಕ್ಕೆ" ಎಂಬ ಜನವಾಣಿಗೆ "ಸಿದ್ಧಗಂಗೆಯಲ್ಲಿ" ಎಂದೋ ಹೊತ್ತಿಸಿದ ಒಲೆ ಇಂದಿಗೂ ಆರದಿರುವುದು" ಹಿರಿಯ ಸಾಕ್ಷಿಯಾಗಿದೆ. ಬಸವಣ್ಣನವರು ತಮ್ಮ ಮಹಾಮನೆಯಲ್ಲಿ ಲಕ್ಷಾವಧಿ ಜಂಗಮರಿಗೆ ಅಂದು ನಡೆಸಿದ ದಾಸೋಹ ಪರಂಪರೆಯನ್ನು ಇಂದು ಶ್ರೀಗಳು ಉಳಿಸಿ ಕೊಂಡು ಬಂದಿದ್ದಾರೆ. ಶ್ರೀ ಶ್ರೀಗಳವರ ಈ ಮಹತ್ತರ ಮಂಗಳ ಕಾರ್ಯಕ್ಕೆ ಅನೇಕ ಮಹನೀಯರು ತಮ್ಮ ಅಳಿಲು ಸೇವೆಯಮೂಲಕ ಸಹಭಾಗಿಗಳಾಗಿದ್ದರೆ. ಅಂತಹವರಲ್ಲಿ ಸಾಗರದ ಶ್ರೀ ಪೈ ಎಂಬುವರು ಒಬ್ಬರು. ಈ ಶ್ರೀಯುತರು ಶ್ರೀ ಕ್ಷೇತ್ರಕ್ಕೆ ಶ್ರೀಗಳವರ ದರ್ಶನಕ್ಕೆ ಬಂದಾಗ ಎರಡು ವಾಗೀನು ಸೌದೆಯನ್ನು ಕಳುಹಿಸಿ ಕೊಡುತ್ತೇನೆಂದು ಒಪ್ಪಿಕೊಂಡಿದ್ದಾರೆ. ಅವರಿಗೂ ಮತ್ತು ಅವರ ಕುಟುಂಬ ವರ್ಗದವರಿಗೂ ಶ್ರೀಗಳವರು ಮತ್ತು ದಯಮಯನಾದ ಸಿದ್ಧಲಿಂಗೇಶ್ವರರು ಕೃಪಾಶೀರ್ವಾದವನ್ನು ನೀಡಲೆಂದು ಆಶಿಸುತ್ತೇವೆ. —ಸಂ—

ಬೇಲಿ

ದೊಡ್ಡಬಾಣಗೆರೆ ಪ್ರಕಾಶಮೂರ್ತಿ

ರಾತ್ರಿ ಉಂಬೋ ಹೊತ್ತು ಮೀರಿತ್ತು. ದೊಡ್ಡವರಲ್ಲಿ ದೊಡ್ಡವರೆನಿಸಿದ್ದ ಹಿರೇದಣೇರಲ್ಲ ಗೌಡನ ಹಜಾರದಲ್ಲಿ ಕೂತಿದ್ರು. ಇವರೆಲ್ಲರ ದೇವ್ರು ಗೌಡ. ಊರಿನ ಮೇಲ್ಮನೆ ಮನುಷ್ಯ ಬೇರೆ. ಮೋತಾಬಾರಿಕುಳ. ತಲೆಗೆ ರುಮಾಲಿನಂತೆ ನೆರೆದಿದ್ದವರೆದುರಿನಲ್ಲಿ ಹಿರಿಯಾಳಾಗಿ ಗೌಡ ಕಟ್ಟೆಯ ಮೇಲೆ ಕಾಲು ಹಾಕಿ ಕುಳಿತಿದ್ದ.

"ಈಗ ಮುಂದೇನ್ಮಾಡ್ಬೇಕೊ ಅಂಬೋದ್ನ ರಪರಪ ಏಳ್ರಪಾ ! ರೊವ್ವೋಟು ಯೋಸ್ನೆ ಮಾಡಿ ಏನ್ಮಾಡೀದ್ರೆ ದಾರಿ ಮುಟ್ಬ್ಯಾದೋ ಅಂತಾ ಬುದ್ಧಿಕ್ನೇ ಮಾಡ್ಬೇಕೂ ಅಂತ ಬಾಯಿ ಬಿಡ್ರಿ. ಸುಮ್ಸುಮ್ನೆ ಕುತ್ಕೊಂಬೋದು ತರವಲ್ಲ" ಅಂತ ಗೊಂಚಿಕಾರ ಗೊಣಗಿ ಅಡಿಕೆ ಎಲೆ ಕುಟ್ಕೋದ್ನ ಷುರುಮಾಡ್ದ.

ಕೂತಿದ್ದ ಗೌಡ ದಡಬಡನೆ ಎದ್ದು ಹೊರಹೋಗಿ ಅಡಿಕೆ ಎಲೆ ಉಗಿತು ಬಾಯಿಯಲ್ಲಿ ನಾಲಗೆಯನ್ನು ಈಜಾಡಿಸಿಕೊಂಡು ಬಂದು ಮತ್ತೆ ಕೂತಿದ್ದ ಜಾಗದಲ್ಲೇ ಕೂತ. ದನಿಯಲ್ಲಿ ದರ್ಪ ತುಂಬಿಕೊಂಡು "ನಾನು ಇಂತಾ ಶಿಕ್ಸೇನೇ ಕೊಡ್ಬೇಕೊ ಅಂತ ಕೇಳಲ್ಲ. ನೀವೆಲ್ಲ ಇದ್ತೀರ. ನಿಮ್ಗೂ ಎಣ್ಮಕ್ಳು ಇಲ್ಲ ಅಂತ ಅಲ್ಲ. ನೀವೆಲ್ಲ ಸೇರಿ ಏನು ತೀರ್ಮಾನ್ಕೆ ಬತ್ತೀರೊ ಅದೇ ತೀರ್ಮಾನ ನಂದೂನು. ಈ ಬಡ್ಡೀಮಗನ್ನ ಅಂಗೇ ಬಟ್ಬೋರುಂಟಾ? ಕಳ್ಳನ್ಮಗನ್ನ ತಕಂಬಂದು" ಅಂತ ಮೀಸೆ ನೀವಿಕೊಂಡು ಕಣ್ಣುಗಳನ್ನು ಗುಂಡಾಗಿಸಿ ಕೊಂಡು ಗೌಡನ ಮಾತುಗಳಲ್ಲಿ ಬಾಳಬಿಗಿ ಇತ್ತು. ಮನಸ್ಸಿನಲ್ಲಿನ ಕೋಪದ ಝಳ ಈತನ ಮಾತಿನ ಧಾಟಿಯನ್ನು ಕೇಳಿದ ಕಿವಿಗಳಿಗೆ ಬಡಿಯದಿರಲಿಲ್ಲ.

"ಎಲ್ಲೋ ಕಾಟ ! ರಂಗ ಬಂದ್ನೇನೊ ?" ಛೇರ್ಮನ್ನು ಕೇಳಿದ.

"ಇಲ್ಲಾ ಸ್ವಾಮಿ ಬತ್ತಾನೀಗ ಬಂದೆ ನಡಿ ಅಂದ. ಅವರಪ್ಪಾನು ಬತ್ತಾನೆ" ಎಂದು ಕಾಟ ಮರು ನುಡಿಯುವಷ್ಟರಲ್ಲಿ.

"ಎಂತದಲೆ ಅದು ಬಂದ ! ಬತ್ತೀನ್ನಡಿ ಅಂದ" ಅವರಪ್ಪಾನು ಬತ್ತನೆ ಅಂಬ್ನೋದು ಎಳಕಂಬರೋದ್ಬಿಟ್ಟು ಓಗೆಲೀ ಹೋಗೊ ಬರ್ರಂತ ಕರ್ಕೊಂ ಬಾ ತೊಲಗವ್ನೆ ಓಗೋ ಅವನ್ಗಿವತ್ತು" ಗೌಡನ ಮಾತಿನಲ್ಲಿ ಮತ್ಸರದ ಕಾಲುವೆ ಹರಿದಿತ್ತು. ಅಕ್ಷರಕ್ಷರವೂ ಕಕ್ಷಿಯ ಚಿತ್ರವನ್ನು ಕಕ್ಕುತ್ತಿದ್ದವು. ರಂಗನ ಮೇಲಿನ ದ್ವೇಷ ಶೃಂಗಾರ ಹಾವ. ಭಾವ ನುಡಿನೇತ್ರಗಳಲ್ಲಿ ವಿಶಾಲವಾಗಿ ಹರಡಿತ್ತು.

ತಳವಾರ ತುಂಬಿದ ಕಾಫಿ ಲೋಟಗಳನ್ನು ತಂದು, ಕೂತಿದ್ದ ದೊಡ್ಡಮೊರೆಗಳ ಕರಗಳಿಗೆ ತಗುಲಿಸಿದ. ಇವರೆಲ್ಲರ ಮನಸ್ಸುಗಳು ಸಹ ರಂಗನ ಮೇಲೆ ಕಾಫೀ ಲೋಟಕ್ಕಿಂತ ಬಹಳ ಪಟ್ಟು ಬಿಸಿಯಾಗಿಯೇ ಸುಡುತ್ತಿದ್ದವು. ಇವರ ಮೇಳ ಗೌಡನ ತಾಳಕ್ಕೆ ತಾಳೆಯಿತ್ತು. ಗೌಡನ ಗುರಿಗೆ ಇವರೆಲ್ಲರ ಕಣ್ಣುಗಳು ಇಣುಕುತ್ತಿದ್ದವು.

"ನಮ್ಮನೆ ಕಸ ಬಾಸ್ಕೊಂಡು ಬಿದ್ದಿದ್ದ ಉಳ ಇವು. ಯಾವ್ದೋ ಹಳೇ ಸಂಬಂಧ ದೂರದ ಬೀಗ್ರನ ಅಂತ ಹತ್ತಿರಕ್ಕೆ ಬಿಟ್ಕೊಂಡಿದ್ಕೆ ಹತ್ತಾಕೆ ಬರೋದ ಈ ಬಡ್ಡಿಮಗ. ಬಾರೆಲೇ ಬಾರೋ ವೇ ತರಲಿಗ" ಎಂದು ಬಂದ ರಂಗನನ್ನು ಗೌಡ ಗಡುಸಾಗಿಯೇ ಗದರಿಸಿದ.

ಗೌಡನ ಗದರಿಕೆಗೆ ರಂಗ ನಿಂತಲ್ಲಿಯೇ 'ವಿಸ್ಯ ಏನಂಬೋದ್ನ ತಿಳ್ದು ಏನು ಯಾಕೆ ಅಂತ ಮುಂದಟ್ಟು ಮಾಡ್ಕೊಂಡು ಮಾತಾಡ್ಬೇಕು ಗೌಡ ಮಾವ, ಅಂಗೆಲ್ಲಾ ವಿನಾ ದುಡುಕ್ಬಾರ್ದು. ಪಂಚಾಯ್ತಿ ಕೂಡಿ ನಡೀತೈತೆ ಅಂತಾ ಇಲ್ಲದ್ದನ್ನ ಸೇರ್ಸಿ" ರಂಗೆದ್ದು ವಿನಯ ಪರನಾಗೇ ತುಟಿ ಬಿಚ್ಚಿದ.

ರಂಗ ಬಿಟ್ಟ ತುಟಿಗಳ ಮಧ್ಯೆ ಬಾಯಿ ಹಾಕಿ "ಏ ! ಅದೆಂಗಲೇ ತರಲೆ ಹೇಳ್ತಾರೆ. ಗೌಡನ ಮಗಳು ಗೌರಿ ಮೇಲೆ ತೋಟದ ಸಾಲ್ನಾಗಿ ಕೈ ಮಾಡ್ದ ರಂಗ ಅಂತ ಯಾರಾನ ಯಾಕಲೇ ಹೇಳ್ತಾರೆ; ಯಾರಿಗೇನ್ಬೀಟೇನೋ ನಿನ್ಮೇಲೆ ಹೇಳ್ದಿದ್ರೆ ಇಲ್ಲದ್ದನ್ನ ಸೇರಿಸಿರೋ ಅಂತ ಸಂಗ್ತಿ ನಾದ್ರು ಏನೋ'' ಎಂದು ಛೇರ್ಮನ್ ಬಿರುಸಾಗಿ ನುಡಿದು ವಿಷಯ ವಸ್ತ್ರ–ವಿಗೆ ಹತ್ತಿರ ನಡೆದ.

ರಂಗನ ಗೆಳೆಯ ಮಲ್ಲ ತಾನು ತಿಳಿದಿದ್ದ ವಿಚಾರವನ್ನು "ರಂಗನ್ನ ಕಂಡರೆ ಗೌರೀಗೆ ಬಾಳ ಪ್ರೀತಿ ಪಾಪ ! ಆಕೆ ಅವನ್ನ ಅವರ ಮನೆಯಾಗಿದ್ದಾಗ್ಲೆ ಶಂದಾಕ್ಮಾಣ್ತಿದ್ಲು. ಈಗೆಲ್ಲೋ ತೊಟದ ದಾರಿಯ್ಯಾಗೆ ಮಾತಾಡಿರ್ಬ್ಯಾದು ಅದ್ರಾಗೇನ್ಯೆತೆ ತಪ್ಪು. ಮಗಳ್ಗೆ ರಂಗನ ಮೇಲೆ ಆಸೆ ಮಾವ ಗೌಡಂಗೆ ರಂಗನ ಮೇಲೆ ಕೋಪ ಅದ್ಕೆ ಯಾರೇನ್ಮಾಡಾಕಾಕೈತಿ" ಅಂತ ತನ್ನ ನಗೆಯಲ್ಲುಗಳಿಂದಲೇ ಚೆಲ್ಲಿದ.

ಆಗ ಗೌಡನ ತಮ್ಮ ಎಂತಾದಲೇ ಅದು ಪ್ರೀತಿ ಶಂದಾಕ್ಮಾಣದೂ ಅಂದ್ರೇನೋ ಅವರವರ್ಗೇನು ಆಗ್ಲೆ ಬರಕೊಟ್ಟಿದ್ದೀವೇನೊ ನಾವು'' ಅಂತ ಸಂಭಾಷಣೆಯ ಮಧ್ಯೆ ಮಾತು ಬಿಟ್ಟ.

"ನೀವು ಅವರವರಿಗೆ ಬರೆದೇನೊ ಕೊಟ್ಟಿಲ್ಲ. ಅವರವರೇ ಬರೆದು ಕೊಟ್ಟಂತೆ ಒಂದಾಗೋಕೆ ಹವಣಿಸ್ತಾ ಇರ್ಬ್ಯಾದು. ರಂಗನಿಗೆ ಆಸೆ ಕಮ್ಮಿಯಾದರೂ "ಗೌರಿಗೆ ರಂಗನ ಮೇಲೆ ಬಾಳ ಅಭಿಮಾನ, ಬಲು ಪ್ರೀತಿ ಅಂತ" ನಾನೇ ಹೇಳ್ತೀನಿ ಇದಕ್ಕೇನಂತೀರಾ? ಮಲ್ಲ ಮಾತು ಮುಂದು ಮಾಡಿದ. "ತೋಟದ ಸಾಲ್ನಾಗೆ ರಂಗ ಗೌರಿ ಮೇಲೆ ಕೈ ಮಾಡಿದ ಅಂದ್ರೆ, ಏನು ಒದೆ ಕೊಟ್ನೇ ? ಅಥ್ವಾ ಇಬ್ರು ನಕ್ಕೊಂಡು ಮಾತಾಡಿದ್ರೆ ಏನಂಬೋದ್ನ ನೋಡ್ದೋರ್ಯಾರು? ಎಸ್ಕತೆ ? ಇವ್ಕೆಲ್ಲಾ ಇ ಸಾಕ್ಷೀ ಸಾಬೀತು ಅವ್ವಾ ಗೌಡ" ಗೆಳೆಯರ ಗುಂಪಿನಲ್ಲಿ ಓಬ ನುಡಿಕಿಡಿಗಳನ್ನು ಎಸೆದ. ರಂಗನ ಪರವ್ನಾದ ಆ ಕಿಡಿನುಡಿಗಳು ಎಲ್ಲರಿಗೂ ಸಿಡಿದವು.

"ಏ! ಏನೋ ನೀನಂದಿದ್ದು. ನಿನಗೆ ಸಾಕ್ಷಿ ಸಾಬೀತು ಬೇಕೇನಲೆ ಕೇಳೋದ ಬೊಗಳೊ ಕತ್ತೆಮಗನೆ ಅಂದ್ರೆ ಸಾಕ್ಷಿ ಸಾಬೀತೂನು ತೋರಿಸ್ಬೇಕೇನೋ ?" ಗೌಡ ಮೇಲೆದ್ದು ಮೀಸೆ ಕುಣಿಸಿಕೊಂಡು ರುದ್ರನುಡಿಗಳನ್ನು ಕಾರಿದ.

ಗೌಡನ ಬೆಂಬಲಿಗರೆಲ್ಲ ಆತನ ಪರವಾಗಿಯೇ ದನಿಗೂಡಿಸಿ ರೇಗಿದರು. ಗೌಡ ರೇಗಿ ಕೋಪದ ಕಿಡಿಗಳನ್ನು ಚೆಲ್ಲಿದ. ಸನ್ನಿವೇಶ ನೋಡಿ ಓಬನಿಗೆ ತಡೆಯಲಾಗಲಿಲ್ಲ ಮುಂದೆ ಬಂದು ಎದುರು ನಿಂತ.

"ಏನ್ಗೌಡ ನಿನ್ನ ಜೋರು ! ನೀನು ಹರಿಶ್ಚಂದ್ರ ಅಂಬೋದು ಊರ್ಗೇ ಗೊತ್ತೈತೆ. ದಾರೀಲಿ ಜಗ್ತಾ ಏನೋ ಮಾತಾಡಿರೋದ್ನ ನೆಪ ಮಾಡ್ಕೊಂಡು ಯಾವ್ದೋ ಹಳೆ ಸಿಟ್ಟಿಟ್ಕೊಂಡು ರಂಗನ ಮೇಲೆ ಅಪವಾದ ಹೊರಿಸೋಕೆ ಬರೋ ನಿನ್ನ ಗುಣ ಯಾವ್ದು ಸರಿಐತೆ ಕೊಡು ಸಾಕ್ಷೀನ ನೀನು ಊರಿನ ದಣಿ. ಊರು ಮುಂದಲ ರಾಮಕ್ಕನ ಮತ್ತು ಕೋಟೆ ಮೇಗ್ಳ ಲಕ್ಷ್ಮವ್ವನ್ನ ನೀನು ಇಟ್ಕೊಂಡು ಏಸೊರ್ಸ ಆಯ್ತು. ಇವರಿಬ್ಬರ್ನೂ ಹಗ್ಲು ರಾತ್ರಿ ಆಳ್ತಾ ಇರೋ ನಿನಗೆ ಯಾರೂ ಕೇಳೋರಿಲ್ವಾ? ಗೌರಮ್ಮಂಗೆ ರಂಗನ್ನ ಮಾಡ್ಕಂಬೋದು. ಗೌರಮ್ಗು ಒಪ್ಗೆ ಅವರಮ್ಮಗೂ ಒಪ್ಗೆ. ನಿನ್ನೊಬ್ಬನ್ಗೆ ಅಂತಾ ಮನ್ಸು ಇಲ್ಲಾ ಅಂದ್ರೆ ಯಾರ್ಮಾಡೋದೇನು. ಸಂಬಂಧದೋರು ವಯುಸ್ಸಿರೋರು ಒಬ್ಬರಿಗೊಬ್ರು ಮೆಚ್ಚಿಕೊಂಡಿರೋರು ಇವರಿಬ್ರು ಕೂಡಿ ಇವತ್ತು ಓಡಿ ವೋದ್ರು ದೇವರು ಅವರಿಗೆ ಕೆಟ್ಟದ್ ಮಾಡೊಲ್ಲ, ಆದ್ರೆ ನೀನು ದೊಡ್ಡ ಮನುಷಾ ಮಾಡ್ತಿರೋವ್ದೆಲ್ಲಾ ಏನ್‌ಗತಿ ಕೊಟ್ತಾನೆ ಗೊತ್ತಾ ಆ ದೇವರು ? ನೀನು ಊರಿಗೆ ಬೇಲಿ ಇದ್ದಂಗೆ. ಆದ್ರೆ ನೀನು ಮಾಡೋದಲ್ಲಾ ಹೊಲ ಮೇಯೋ ಕೆಲ್ಸ. ನಿನ್ನ ಹಿಂದೆ ಇರೋ ಇವ್ರೆಲ್ಲಾ ನಿನ್ನ ಹಿಂದೇನೆ ಇದ್ಕೊಂಡು ಮೇಯೋ ಕೆಲ್ಸಾನೆ ಮಾಡೋದು. ನೀನು ಮಾಡೋದು ಯಾರಿಗೊತ್ತಿಲ್ಲ ನಮ್ಮೂರಾಗೆ, ಅನಾಚಾರ, ದಾರಿಬಿಟ್ಟ ನಡತೆ, ಮಾಡಬಾರದ ಕೆಲಸ ಇವೆಲ್ಲಾ ನಿಮ್ಮಿಂದಾನೆ ಆಗೋದು. ಗೌರಮ್ಮಂಗೂ ರಂಗಂಗೂ ಅಂಗಿರ್ಲಿ ಇವರ್ಗೆ ಹಳೆ ಸಂಬಂಧನಾರ ಐತೆ. ನಿನಗೂ ಊರ ಮುಂದ್ಲ ರಾಮಕ್ಕಂಗೂ ಕೋಟೆ ಮೇಗ್ಳ ಲಕ್ಷ್ಮವ್ವಗೂ ಏನೈತೇಳು ನಿಮ್ಮೂವಾರ್ಗೂ ಸಂಬಂಧ." ಓಬನ ಬಿರುಸು ನುಡಿಗಳು ಸತ್ಯವನ್ನೂ ಮುಂದೆ ನಿಲ್ಲಿಸಿದ್ದವು. ಗೌಡನನ್ನು ಭೂಮಿಗಿಳಿಸಿ, ಗೌಡನ ಬೆಂಬಲಿಗರನ್ನು ಕತ್ತಲೆಯನ್ನು ಬೆಳಗಿನ ಸೂರ್ಯ ಓಡಿಸುವಂತೆ ತಳ್ಳಿ ಬಿಟ್ಟವು.

ಗೌಡನ ಹೆಂಡ್ತಿ ಬಂದು ಗೌಡನನ್ನು ಒಳಗೆಳೆದು ಒಯ್ದಳು. ಇದೆಲ್ಲಾ ಬೇಡ ಅಂತ ಬೈಗಿನಾಗೇ ಹೇಳಿ ತಾನು ಏಟು ಕೊಟ್ಟಿದ್ದನ್ನು ಗೌಡನಿಗೆ ನೆನಪಿಸಿದಳು. ಒಳಗಿನ ಕಿಟಕಿಯಲ್ಲಿ ಬಗ್ಗಿ ಬಗ್ಗಿ ನೋಡುತ್ತಿದ್ದ ಗೌರಿದು ನೇರ ದೃಷ್ಟಿ ಜೊತೆಗಾರರೊಂದಿಗೆ ಹೊರಗಿದ್ದ ರಂಗನ ಕಣ್ಣುಗಳಿಗೂ ತಗುಲಿತ್ತು.

ಅನುಗ್ರಹ ಭಾಷಣ

ಕೊಡಗು ಜಿಲ್ಲಾ ಕೊಡಲಿ ಪೇಟೆ ಕಲ್ಲುಮಠದಲ್ಲಿ ೬-೧-೭೮ ರಂದು ಲಿಂ. ಶ್ರೀ ನಿ. ಪ್ರ. ಸ್ವರೂಪಿ ನಂಜುಂಡ ಸ್ವಾಮಿಗಳವರ ಶಿವಗಣ ಮಹಾಸಮಾರಾಧನೆಯ ಕಾಲಕ್ಕೆ ದಯಮಾಡಿಸಿದಾಗ ಅಲ್ಲಿ ಸೇರಿದ ಸಮಸ್ತ ಭಕ್ತ ವೃಂದವನ್ನುದ್ದೇಶಿಸಿ ಮಾಡಿದ ಅನುಗ್ರಹ ಭಾಷಣದ ಸಾರಾಂಶ.

ಕೊಡಗಿನ ಮಹಾರಾಜರು ಧರ್ಮಭೀರುಗಳು ಜನತೆಯಲ್ಲಿ ಧಾರ್ಮಿಕ ಬುದ್ಧಿಯನ್ನು ಜಾಗೃತಿಗೊಳಿಸಲು ಅನೇಕ ಮಠಮಾನ್ಯಗಳನ್ನು ನಿರ್ಮಾಣ ಮಾಡಿ ದತ್ತಿ ಮೊದಲಾದುವುಗಳನ್ನು ಕೊಟ್ಟು ಪೋಷಿಸಿ ಕೊಂಡು ಬಂದ ಅಂಶ ಪ್ರಸಿದ್ಧ. ಅಂಥ ಮಠಗಳಲ್ಲಿ ಈ ಕೊಡಲೀಪೇಟೆಯ ವಿರಕ್ತ ಮಠವೂ ಒಂದು. ಕಳೆದ ತಿಂಗಳು ಲಿಂಗೈಕ್ಯರಾದ ಪೂಜ್ಯ ನಂಜುಂಡ ಸ್ವಾಮಿಗಳು ಈ ಮಠಕ್ಕೆ ಅಧಿಕಾರಿಗಳಾಗಿ ನಮ್ಮ ಪೂಜ್ಯ ಗುರುಗಳಾದ ಉದ್ದಾನಶಿವಯೋಗಿಗಳ ಕೃಪಾಶೀರ್ವಾದ ಪಡೆದು ಬಂದರು. ಸಿದ್ಧಗಂಗಾಕ್ಷೇತ್ರದಲ್ಲಿ ಅನೇಕ ವರ್ಷ ನಮ್ಮ ಗುರುಗಳವರ ಸೇವೆ ಮಾಡಿ ಅವರ ಅನುಗ್ರಹಕ್ಕೆ ಪಾತ್ರರಾಗಿದ್ದ ಶ್ರೀ ನಂಜುಂಡ ಶಿವಯೋಗಿಗಳು ಸ್ವಯಂ ಸಿದ್ಧಿ ಬುದ್ಧಿಯನ್ನು ಪಡೆದವರು; ನ್ಯಾಯನಿಷ್ಠುರಿಗಳು. ಅವರು ಈ ಮಠದ ಅಧಿಕಾರ ಪಡೆದಮೇಲೆ ಸ್ವತಃ ಕೈಯಲ್ಲಿ ಗುದ್ದಲಿ ಸಲಿಕೆ ಹಿಡಿದು ಕೇಸಗಾಡಿ ದುರ್ಗಮವಾಗಿದ್ದ ಅರಣ್ಯವನ್ನು ಕಡಿದು ತೋಟಗದ್ದೆಗಳ ಸಾಗುವಳಿ ಮಾಡಿದರು. ಮಠವನ್ನು ಊರ್ಜಿತಾವಸ್ಥೆಗೆ ತಂದರು. ಈ ಭಾಗದಲ್ಲಿ ಧರ್ಮ ಜಾಗೃತಿಗೊಳಿಸಿದರು. ಅವರು ನಮಗೂ ಹಿರಿಯರಾಗಿದ್ದರು. ಶ್ರೀ ಸಿದ್ಧಗಂಗಾ ಕ್ಷೇತ್ರಕ್ಕೆ ದಯಮಾಡಿಸಿ ನಮಗೂ ಅನೇಕ ರಚನಾತ್ಮಕ ಸಲಹೆ ಸಹಕಾರ ಕೊಡುತ್ತಿದ್ದರು. ಅವರ ಲಿಂಗೈಕ್ಯ ಭೌತಿಕವಾಗಿ ನಮಗೂ ವೈಯಕ್ತಿಕ ನಷ್ಟವನ್ನುಂಟು ಮಾಡಿದೆ. ಅವರ ಕರಕಂಜ ಸಂಜಾತರಾದ ಶ್ರೀ ಮಹಾಂತ ಸ್ವಾಮಿಗಳು ಚಿಕ್ಕವರು. ಇವರು ಶ್ರೀ ಸಿದ್ಧಗಂಗೆಯಲ್ಲಿ ಅನೇಕ ವರ್ಷ ವಿದ್ಯಾಭ್ಯಾಸ ಮಾಡಿ ಬಂದಿದ್ದಾರೆ. ಯಥೋಚಿತ ನಮ್ಮ ಸೇವೆಯನ್ನು ಮಾಡಿದ್ದಾರೆ. ಇಲ್ಲಿನ ಸಮಸ್ತ ಭಕ್ತ ಮಂಡಳಿ ಅವರಿಗೆ ಸಹಕಾರ ಸಲಹೆ ಕೊಟ್ಟು ಮಠದ ಉತ್ತರೋತ್ತರ ಅಭಿವೃದ್ಧಿಗೆ ನೆರವಾಗಬೇಕೆಂದು ಆಶೀಸುತ್ತೇವೆ.

ವೀರಶೈವ ಧರ್ಮ ಎಲ್ಲರಿಗೂ ಶಿವಲಿಂಗಪೂಜಾ ಸ್ವಾತಂತ್ರ್ಯವನ್ನುಂಟುಮಾಡಿರುವ ಒಂದು ಪ್ರತ್ಯಕ್ಷ ಕಲ್ಪನೆಯ ಧರ್ಮ. ಇಷ್ಟಲಿಂಗಕ್ಕೂ ಸ್ಥಾವರ ಲಿಂಗಕ್ಕೂ ಭೇದವಿದೆ. ಭಕ್ತನ ಮಸ್ತಕದ ಚಿತ್ಕಳೆಯೇಭಾವಮನ ನೇತ್ರಗಳ ಮೂಲಕ ಕರಸ್ಥಳಕ್ಕೆ ಬಂದು ಸರ್ವರಿಗೆ ಸದಾಕಾಲ ಪೂಜಾ ಸ್ವಾತಂತ್ರ್ಯವನ್ನುಂಟು ಮಾಡಿರುವ ಈ ಲಿಂಗ ಪೂಜೆಯಲ್ಲಿ ಎಲ್ಲವೂ ಅಡಕವಾಗಿದೆ. ಹೀಗೆ ಅಪ್ಪಣೆ ಕೊಡಿಸುತ್ತ "ಗುರುಕರೋದ್ಭವ ತಾನಾದ ಶರಣಗುಂಟೆ ಸರಿಭವ" ಎಂಬ ಸುಂದರ ತತ್ವಬೋಧಕ ಪದ್ಯಾರ್ಥ ವಿವರಣೆ ಮಾಡಿ ಲಿಂಗಪೂಜೆಯ ಮಹತ್ತು ಬೃಹತ್ತುಗಳನ್ನು ವಿವರಿಸಿದರು. ಕೊನೆಯಲ್ಲಿ ದಾಸಿಮಯ್ಯನವರ "ಇಳೆನಿಮ್ಮ ದಾನ, ಬೆಳೆನಿಮ್ಮ ದಾನ, ಸುತ್ತಿ ಸುಳಿಯುವ ಗಾಳಿ ನಿಮ್ಮ ದಾನ ನಿಮ್ಮ ದಾನವನ್ನುಂಡು ಅನ್ಯವ ಸ್ಮರಿಸುವ ಕುನ್ನಿಗಳನೇನೆಂಬೆ" ಎಂಬ ವಚನಾರ್ಥ ವಿವರಿಸಿ ಜೀವ ಜಗತ್ತು ಈಶ್ವರ ಈ ಮೂರರ ಬಗೆಗೆ ಮನುಷ್ಯನ ಚಿಂತನೆಯ ರಹಸ್ಯವನ್ನು ಅರುಹಿದರು. ಸುಮಾರು ೪೦ ಜನ ಹರಗುರು ಚರಮೂರ್ತಿಗಳು ನಾಡಿನ ಇತರ ಕಡೆಗಳಿಂದ ದಯಮಾಡಿಸಿದ್ದರು. ಅಧಿಕ ಸಂಖ್ಯೆಯ ಭಕ್ತ ವೃಂದ ಈಗ ಈ ಶಿವಗಣಾರಾಧನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

"SIDDAGANGA" Monthly, Sree Siddaganga Mutt. KRN Q-9
Registered with the Registrar of News papers for India under No. 17139/69

ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿ ಮುದ್ರಣಾಲಯ, ಶ್ರೀ ಸಿದ್ಧಗಂಗಾಮಠ